# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಮಂಗಳವಾರ, ಡಿಸೆಂಬರ್ 29, 2020

ಸಂಪುಟ : 47 ಸಂಚಿಕೆ : 239 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 4 ರೂ : 3.00 www.janathavani.com janathavani@mac.com


1


2


3

**ಕಾರ್ತಿಕೋತ್ಸವ**

1. ದಾವಣಗೆರೆ ಚೌಕಿಪೇಟೆಯ ಶ್ರೀ ಗುರು ಬಕ್ಕೇಶ್ವರ ಸ್ವಾಮಿ ಕಾರ್ತಿಕೋತ್ಸವವು ಸೋಮವಾರ ಸಂಜೆ ನಡೆಯಿತು. 2. ದೊಡ್ಡಪೇಟೆಯಲ್ಲಿನ ಶ್ರೀ ಬಸವೇಶ್ವರ ಸ್ವಾಮಿ ಮತ್ತು ಶ್ರೀ ದಾನಮ್ಮ ದೇವಿ ದೇವಸ್ಥಾನದಲ್ಲಿ ಸೋಮವಾರ ಸಂಜೆ ಏರ್ಪಾಡಾಗಿದ್ದ ಕಾರ್ತಿಕ ದೀಪೋತ್ಸವಕ್ಕೆ ಕೈಗಾರಿಕೋದ್ಯಮಿ ಅಥಣಿ ವೀರಣ್ಣ ಚಾಲನೆ ನೀಡಿದರು. 3. ತರಳಬಾಳು ಬಡಾವಣೆಯಲ್ಲಿರುವ ಶ್ರೀ ಶಿವಕುಮಾರ ಸ್ವಾಮಿ ಮಹಾಮಂಟಪದಲ್ಲಿ ಶ್ರೀ ವಿಶ್ವಬಂಧು ಮರುಳಸಿದ್ಧೇಶ್ವರ ಕಾರ್ತಿಕ ಮಹೋತ್ಸವ ಸಂಜೆ ನಡೆಯಿತು. 'ಜನತಾವಾಣಿ' ಸಂಪಾದಕ ಎಂ.ಎಸ್. ವಿಕಾಸ್, ತಾಲ್ಲೂಕು ಕಸಾಪ ಅಧ್ಯಕ್ಷ ಬಿ.ವಾಮದೇವಪ್ಪ, ಬಿಜೆಪಿ ಮುಖಂಡ ಎನ್.ಜಿ. ಪುಟ್ಟಸ್ವಾಮಿ, ಪಾಲಿಕೆ ಸದಸ್ಯೆ ಗೀತಾ ದಿಳ್ಯೆಪ್ಪ, ದಿಳ್ಯೆಪ್ಪ, ಕೆ.ಬಿ. ಪರಮೇಶ್ವರಪ್ಪ, ಜಯಣ್ಣ, ಮಾಗನೂರು ಪ್ರಭು, ಶಾಮನೂರು ಲಿಂಗರಾಜ್ ಸೇರಿದಂತೆ ಇತರರು ಕಾರ್ತಿಕ ಮಹೋತ್ಸವದಲ್ಲಿ ಭಾಗವಹಿಸಿದ್ದರು.

## ಗ್ರಾಮ ಪಂಚಾಯ್ತಿ: ನಾಳೆ ಮತ ಎಣಿಕೆ

ದಾವಣಗೆರೆ, ಡಿ.28- ಜಿಲ್ಲೆಯಾದ್ಯಂತ ಎರಡು ಹಂತಗಳಲ್ಲಿ ನಡೆದಿರುವ ಗ್ರಾಮ ಪಂಚಾಯ್ತಿ ಚುನಾವಣೆಯ ಮತ ಎಣಿಕೆ ಕಾರ್ಯ ನಾಳೆ ಬುಧವಾರ ನಡೆಯಲಿದೆ.

ಚುನಾವಣೆಗೆ ಸ್ಪರ್ಧಿಸಿದ ಅಭ್ಯರ್ಥಿಗಳ ಹೃದಯ ಬಡಿತ ಹೆಚ್ಚುತ್ತಿದ್ದರೆ, ಮತ್ತೊಂದೆಡೆ ಹಳ್ಳಿಗಳಲ್ಲಿ ಸೋಲು-ಗೆಲುವಿನ ಲೆಕ್ಕಾಚಾರ ನಡೆಯುತ್ತಿದೆ.

ಮೊದಲ ಹಂತದಲ್ಲಿ ನಡೆದ ದಾವಣಗೆರೆ, ಹೊನ್ನಾಳಿ ಹಾಗೂ ಜಗಳೂರು ತಾಲ್ಲೂಕುಗಳ 88 ಗ್ರಾಮ ಪಂಚಾಯ್ತಿಗಳ 1087 ಸ್ಥಾನಗಳಿಗೆ ಹಾಗೂ ಎರಡನೇ ಹಂತದಲ್ಲಿ ನಡೆದ ಹರಿಹರ, ನ್ಯಾಮತಿ ಹಾಗೂ ಚನ್ನಗಿರಿ ತಾಲ್ಲೂಕಿನ 101 ಪಂಚಾಯ್ತಿಗಳ 1112 ಸ್ಥಾನಗಳಿಗೆ ಚುನಾವಣೆ ನಡೆದಿತ್ತು.

ಇದೀಗ ಅಭ್ಯರ್ಥಿಗಳ ಹಣೆ ಬರಹ ಮತಗಟ್ಟೆಗಳಲ್ಲಿ (3ನೇ ಪುಟಕ್ಕೆ)



### ಜಿಲ್ಲೆಯಲ್ಲಿ ನಿಷೇಧಾಜ್ಞೆ ಮದ್ಯಮಾರಾಟ ನಿಷೇಧ

**ದಾವಣಗೆರೆ, ಡಿ.28- ಗ್ರಾಮ ಪಂಚಾಯಿತಿ ಚುನಾವಣೆ ಮತ ಎಣಿಕೆ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ದೃಷ್ಟಿಯಿಂದ ಡಿ.30ರ ಬೆಳಿಗ್ಗೆ 6 ಗಂಟೆಯಿಂದ ಮಧ್ಯರಾತ್ರಿ 12 ಗಂಟೆಯವರೆಗೆ ಮದ್ಯಮಾರಾಟ ಮತ್ತು ಸರಬರಾಜು ನಿಷೇಧಿಸಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಆದೇಶಿಸಿದ್ದಾರೆ.**

**ನಿಷೇಧಾಜ್ಞೆ: ಡಿ.30ರ ಬೆಳಿಗ್ಗೆ 6 ಗಂಟೆಯಿಂದ ಡಿ.31ರ ಬೆಳಿಗ್ಗೆ 6 ಗಂಟೆಯವರೆಗೆ ಜಿಲ್ಲಾದ್ಯಂತ ನಿಷೇಧಾಜ್ಞೆ ಜಾರಿಗೊಳಿಸಲಾಗಿದ್ದು, ಈ ಸಮಯದಲ್ಲಿ ಗೆದ್ದ ಅಭ್ಯರ್ಥಿಗಳು ಮೆರವಣಿಗೆ ಮಾಡುವುದು ಸಭೆ, ಸಮಾರಂಭ ನಡೆಸುವುದು ಪಟಾಕಿ ಸಿಡಿಸುವುದು, ಘೋಷಣೆ ಕೂಗುವುದು ನಿಷೇಧಿಸಿ ಜಿಲ್ಲಾಧಿಕಾರಿ ಆದೇಶಿಸಿದ್ದಾರೆ.**

## ರೈತರನ್ನು ಮತ್ತೆ ಮಾತುಕತೆಗೆ ಕರೆದ ಕೇಂದ್ರ ಸರ್ಕಾರ

ನವದೆಹಲಿ, ಡಿ.28- ಕೃಷಿ ಕಾಯ್ದೆಗಳನ್ನು ವಿರೋಧಿಸಿ ಪ್ರತಿಭಟನೆ ನಡೆಸುತ್ತಿರುವ 40 ರೈತ ಸಂಘಟನೆಗಳನ್ನು ಮುಂದಿನ ಸುತ್ತಿನ ಮಾತುಕತೆಗೆ ಕೇಂದ್ರ ಸರ್ಕಾರ ಸೋಮವಾರ ಆಹ್ವಾನ ನೀಡಿದೆ. ಮೂರು ಕೃಷಿ ಕಾಯ್ದೆಗಳಿಗೆ ಸಂಬಂಧಿಸಿದಂತೆ ವಿರೋಧಗಳಿಗೆ ತಾರ್ಕಿಕ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಇದೇ ಡಿಸೆಂಬರ್ 30ರಂದು ಸಭೆ ಕರೆಯಲಾಗಿದೆ.

ದೆಹಲಿಯ ವಿಜ್ಞಾನ ಭವನದಲ್ಲಿ ಡಿಸೆಂಬರ್ 30ರಂದು ಮಧ್ಯಾಹ್ನ 2 ಗಂಟೆಗೆ (2ನೇ ಪುಟಕ್ಕೆ)

## ಹೆಬ್ಬಾಳು ಎರಡು ಮತಗಟ್ಟೆಗಳಲ್ಲಿ ಇಂದು ಮರು ಮತದಾನ

ದಾವಣಗೆರೆ, ಡಿ. 28- ಹೆಬ್ಬಾಳು ಗ್ರಾಮ ಪಂಚಾಯಿತಿಯ ಹೆಬ್ಬಾಳು-1 ಮತ್ತು ಹೆಬ್ಬಾಳು-2 ಕ್ಷೇತ್ರಗಳಿಗೆ ಮತದಾರರ ಪಟ್ಟಿಯನ್ನು ಸರಿಪಡಿಸಿಕೊಂಡು ಮರು ಮತದಾನವನ್ನು ನಾಳೆ ದಿನಾಂಕ 29 ರ ಮಂಗಳವಾರ ನಡೆಸಲಾಗುವುದು.

ಹೆಬ್ಬಾಳು-1 ಮತ್ತು ಹೆಬ್ಬಾಳು-2 ಕ್ಷೇತ್ರಗಳಿಗೆ ಮತಗಟ್ಟೆ ಸಂಖ್ಯೆ 108 ಮತ್ತು 109 ರಲ್ಲಿ ನಾಳೆ ಮಂಗಳವಾರ ಮರು ಮತದಾನ ನಡೆಸಲಾಗುವುದು. ನಾಳೆ ಜರುಗುವ ಮತದಾನದಲ್ಲಿ ಮತ ಚಲಾವಣೆ ಮಾಡಿದ ಮತದಾರ ಎಡಗೈ ಹೆಬ್ಬೆರಳಿಗೆ ಅಳಿಸಲಾಗದ ಶಾಹಿ ಗುರುತು ಮಾಡಲಾಗುವುದೆಂದು ಡಿಸಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ.

# ನಗರ, ಪಟ್ಟಣದಲ್ಲಿ ಆಸ್ತಿ ತೆರಿಗೆ ಹೆಚ್ಚಳಕ್ಕೆ ಸರ್ಕಾರದ ನಿರ್ಧಾರ

ಬೆಂಗಳೂರು, ಡಿ. 28- ಕೋವಿಡ್-19 ನಿಂದ ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ರಾಜ್ಯ ಸರ್ಕಾರ ನಗರ, ಪಟ್ಟಣ ಪ್ರದೇಶದಲ್ಲಿ ಆಸ್ತಿ ತೆರಿಗೆ ಹೆಚ್ಚಳಕ್ಕೆ ಮುಂದಾಗಿದೆ.

ಆಸ್ತಿ ತೆರಿಗೆ ಹೆಚ್ಚಳ ಮಾಡುವ ಸಂಬಂಧ ಇಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಸುದೀರ್ಘ ಚರ್ಚೆಯ ನಂತರ, ಹೊಸ ವರ್ಷದಲ್ಲಿ ಆರಂಭಗೊಳ್ಳಲಿರುವ ವಿಧಾನಮಂಡಲದ ಅಧಿವೇಶನದಲ್ಲಿ ಆಸ್ತಿ ತೆರಿಗೆ ಹೆಚ್ಚಳಕ್ಕೆ ಸಂಬಂಧಿಸಿದಂತೆ ಕಾನೂನಿಗೆ ತಿದ್ದುಪಡಿ ತಂದು, ಮಸೂದೆ ಅಂಗೀಕಾರ ಪಡೆಯುವ ನಿರ್ಧಾರಕ್ಕೆ ಬಂದಿದೆ.

ನಗರ ಪಾಲಿಕೆ, ನಗರಸಭೆ ಮತ್ತು ಪುರಸಭೆ ವ್ಯಾಪ್ತಿಯಲ್ಲಿನ ಆಸ್ತಿ ತೆರಿಗೆಯನ್ನು ಶೇ 15 ರಿಂದ 30ಕ್ಕೆ ಹೆಚ್ಚಿಸುವ ಪ್ರಸ್ತಾವನೆಯನ್ನು ಈಗಾಗಲೇ ನಗರಾಭಿವೃದ್ಧಿ ಇಲಾಖೆ ಸರ್ಕಾರದ ಮುಂದಿಟ್ಟಿದೆ.

ಇದೇ ಸಂದರ್ಭದಲ್ಲಿ ವಾಣಿಜ್ಯ ಕಟ್ಟಡ ಸೇರಿದಂತೆ, ಇತರೆ ಸಾರ್ವಜನಿಕ ಉದ್ಯಮಿಗಳ ಕಟ್ಟಡಗಳ ಮೇಲೂ ಭಾರೀ ಪ್ರಮಾಣದಲ್ಲಿ ತೆರಿಗೆ ಹೆಚ್ಚಳ ಮಾಡಲು ಮುಂದಾಗಿದೆ.

ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ಆರ್ಥಿಕ ಮುಗ್ಗಟ್ಟು ಎದುರಾಗಿದೆ. ಅಲ್ಲದೆ, ರಾಜ್ಯ ಸರ್ಕಾರವೂ ಅಗತ್ಯ ಅನುದಾನವನ್ನು ಸಕಾಲಕ್ಕೆ ಬಿಡುಗಡೆ ಮಾಡಲಾಗುತ್ತಿಲ್ಲ.

ಸ್ಥಳೀಯ ಸಂಸ್ಥೆಗಳು ಸ್ವಂತ ಕಾಲ ಮೇಲೆ ನಿಂತುಕೊಳ್ಳಬೇಕು. ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಅಗತ್ಯವಿರುವ ಹಣವನ್ನು ಕ್ರೋಢೀಕರಿಸುವ ಉದ್ದೇಶದಿಂದ ತೆರಿಗೆ ಹೆಚ್ಚಳಕ್ಕೆ ಮುಂದಾಗಿದೆ.

**ರಾಷ್ಟ್ರದ ಪ್ರಮುಖ ಮಹಾನಗರ ಪಾಲಿಕೆ ಹಾಗೂ ನಗರ ಸಭೆಗಳಲ್ಲಿ ತೆರಿಗೆ ಹೆಚ್ಚಳ ಕರ್ನಾಟಕ ರಾಜ್ಯಕ್ಕಿಂತ ಹೆಚ್ಚಿದೆ. ಇದೆಲ್ಲ ಮನದಲ್ಲಿಟ್ಟುಕೊಂಡು ನಗರಾಭಿವೃದ್ಧಿ ಇಲಾಖೆ ತೆರಿಗೆ ಪರಿಷ್ಕರಣೆಗೆ ಮುಂದಾಗಿದೆ.**

ಕಳೆದ ಜನವರಿ 2020 ರಲ್ಲೇ ಆಸ್ತಿ ತೆರಿಗೆ ಹೆಚ್ಚಳ ಮಾಡಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಲಾಗಿತ್ತು. ಪ್ರಸ್ತಾವನೆ ಸಂಪುಟಕ್ಕೆ ಬರುವ ಸಂದರ್ಭದಲ್ಲೇ ರಾಜ್ಯದಲ್ಲಿ ಕೋವಿಡ್-19 ಮತ್ತು ಲಾಕ್‌ಡೌನ್ ಎದುರಾಗಿದ್ದರಿಂದ ಕಡತ ಹಾಗೆಯೇ ಉಳಿದುಕೊಂಡಿತ್ತು.

ಇಂದು ನಡೆದ ಸಚಿವ ಸಂಪುಟ ಸಭೆಯಲ್ಲೇ ಅನುಮತಿ ಪಡೆದು, ಸುಗ್ರೀವಾಜ್ಞೆ ಮೂಲಕ ಹೆಚ್ಚಿಸುವ ವ ಪ್ರಯತ್ನವನ್ನು ಇಲಾಖೆ ನಡೆಸಿತ್ತು.

ಈಗಾಗಲೇ ಆರ್ಥಿಕ ವರ್ಷ ಮುಗಿದಿರುವುದರಿಂದ ಮುಂದಿನ ಆರ್ಥಿಕ ವರ್ಷಕ್ಕೆ ಪರಿಷ್ಕರಣೆಯನ್ನು ಅಳವಡಿಸುವುದು ಇದಕ್ಕೆ ಮತ್ತಷ್ಟು ಸಮಯ ಅವಕಾಶವಿರುವುದರಿಂದ ಸುಗ್ರೀವಾಜ್ಞೆ ಬದಲು ಸದನದಲ್ಲಿ ಮಸೂದೆ ಮಂಡಿಸಿ, ಅಂಗೀಕಾರ ಪಡೆದು, ಅನುಷ್ಠಾನಗೊಳಿಸುವ ನಿರ್ಧಾರಕ್ಕೆ ಬರಲಾಗಿದೆ.

## ಗೋಹತ್ಯೆ ಪ್ರತಿಬಂಧಕ ಕಾಯ್ದೆಗೆ ಸಂಪುಟ ಅಸ್ತು

ಬೆಂಗಳೂರು, ಡಿ. 28- ಕಾಂಗ್ರೆಸ್ ಹಾಗೂ ಕೆಲವು ಸಮಾಜಗಳ ವಿರೋಧದ ನಡುವೆಯೇ ಕೆಲವು ತಿದ್ದುಪಡಿಗಳೊಂದಿಗೆ ಗೋಹತ್ಯೆ ಪ್ರತಿಬಂಧಕ ಕಾಯ್ದೆಗೆ ಇಂದಿಲ್ಲಿ ಸೇರಿದ್ದ ರಾಜ್ಯ ಸಚಿವ ಸಂಪುಟ ಹಸಿರು ನಿಶಾನೆ ತೋರಿದೆ.

ಸಂಪುಟ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ. ಮಾಧುಸ್ವಾಮಿ, ಕಾಯ್ದೆಯನ್ನು ಸುಗ್ರೀವಾಜ್ಞೆ ಮೂಲಕ ಅನುಷ್ಠಾನಗೊಳಿಸಲು ಸಭೆ ತೀರ್ಮಾನ ಕೈಗೊಂಡಿದೆ ಎಂದರು.

ಗೋಹತ್ಯೆ ನಿಷೇಧ ಕಾಯ್ದೆಯ ತಿದ್ದುಪಡಿ ಮಸೂದೆ ಜಾರಿಗಾಗಿ ಕಡತವನ್ನು ನಾಳೆ ರಾಜ್ಯಪಾಲರಿಗೆ ಕಳುಹಿಸಿಕೊಡಲಾಗುವುದೆಂದರು.

ಗೋಹತ್ಯೆ ನಿಷೇಧ ಮಸೂದೆ ಜಾರಿಯಾದರೂ, ಗೋಮಾಂಸ ಮಾರಾಟ ನಿಷೇಧವಾಗುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ರಾಜ್ಯದಲ್ಲಿ 1964ರಿಂದಲೂ ಈ ಕಾಯ್ದೆ ಜಾರಿಯಲ್ಲಿದೆ. ಹಿಂದಿನ ಕಾಯ್ದೆಯಲ್ಲಿ 12 ವರ್ಷ ಮೇಲ್ಪಟ್ಟ ಹಸು, 13 ವರ್ಷ ಮೇಲ್ಪಟ್ಟ ಎಮ್ಮೆಯನ್ನು ವಧೆ (3ನೇ ಪುಟಕ್ಕೆ)

## 124 ಕೋಟಿ ರೂ.ಹಳೆಬೀಡು ನೀರಾವರಿ ಯೋಜನೆಗೆ ರಾಜ್ಯ ಸಂಪುಟ ಮಂಜೂರಾತಿ

ದಾವಣಗೆರೆ, ಡಿ.28- ಹಾಸನ ಜಿಲ್ಲೆಯ ಹಳೇಬೀಡು ಮತ್ತು ಆ ಭಾಗದ ಅನೇಕ ಕೆರೆಗಳಿಗೆ ಗುರುತ್ವ ಬಲದಿಂದ ಸುರಂಗ ಮಾರ್ಗದ ಮೂಲಕ ಹಳೆಬೀಡು ಮತ್ತಿತರೆ ಕೆರೆಗಳಿಗೆ ನೀರು ಹರಿಸುವ ಅಪರೂಪದ 124 ಕೋಟಿ ರೂ.ಗಳ ನೀರಾವರಿ



### ಹೊಯ್ಸಳ ಸಾಮ್ರಾಜ್ಯ ಮತ್ತೆ ಉದಯಿಸಿದಂತಾಗಿದೆ ನಮ್ಮ ಸಂಕಲ್ಪ ಈಡೇರಿದೆ: ತರಳಬಾಳು ಶ್ರೀಗಳ ಹರ್ಷ

ಯೋಜನೆಗೆ ಸಚಿವ ಸಂಪುಟದಲ್ಲಿ ಮಂಜೂರಾತಿ ದೊರೆತಿರುವುದಕ್ಕೆ ತರಳಬಾಳು ಬೃಹನ್ಮಠದ ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಹರ್ಷ ವ್ಯಕ್ತಪಡಿಸಿದ್ದಾರೆ.

ಹೊಯ್ಸಳರ ಕಾಲದಲ್ಲಿ ಯಗಚಿ ನದಿಯಿಂದ ಕೆರೆಗಳಿಗೆ ನೀರು ತುಂಬಿಸಲು ಕೆಲವು ಕಿಲೋಮೀಟರ್ ದೂರ ಒಂದು ಆಳವಾದ ಕಾಲುವೆ (2ನೇ ಪುಟಕ್ಕೆ)



**ಲಿಂಗೇಶ್ವರ ದೇವಸ್ಥಾನದಲ್ಲಿ ಕಾರ್ತಿಕ**

ದಾವಣಗೆರೆ ಅಶೋಕ ಚಿತ್ರಮಂದಿರದ ಬಳಿಯ ಶ್ರೀ ಲಿಂಗೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಸೋಮವಾರ ಸಂಜೆ ಏರ್ಪಾಡಾಗಿದ್ದ ಕಾರ್ತಿಕ ದೀಪೋತ್ಸವಕ್ಕೆ ಗಣ್ಯರು ಚಾಲನೆ ನೀಡಿದರು.

## ಜಗಳೂರು ಪಟ್ಟಣ ಪಂಚಾಯ್ತಿ ಮೇಲ್ದರ್ಜೆಗಾಗಿ ಪ್ರಸ್ತಾವನೆ

### ವಿಶೇಷ ಅನುದಾನಕ್ಕೆ ಸಿಎಂ ಬಳಿ ನಿಯೋಗ - ಶಾಸಕ ಎಸ್‌ವಿಆರ್

ಜಗಳೂರು, ಡಿ.28- ಪಟ್ಟಣ ಪಂಚಾಯಿತಿಯನ್ನು ಮೇಲ್ದರ್ಜೆಗೇರಿಸಲು ಸರ್ಕಾರಕ್ಕೆ ಪ್ರಸ್ತಾವನೆ ಹಾಗೂ ಪಟ್ಟಣದ ಅಭಿವೃದ್ದಿಗಾಗಿ ಹೆಚ್ಚಿನ ಅನುದಾನ ತರಲು ಮುಖ್ಯಮಂತ್ರಿ ಯಡಿಯೂರಪ್ಪ ರವರ ಬಳಿ ನಿಯೋಗ ತೆರಳಲಾಗುವುದು ಎಂದು ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷರೂ ಆದ ಶಾಸಕ ಎಸ್.ವಿ. ರಾಮಚಂದ್ರ ಹೇಳಿದರು.

ಇಲ್ಲಿನ ಪಟ್ಟಣ ಪಂಚಾಯಿತಿ ಕೌನ್ಸಿಲ್ ಸಭಾಂಗಣದಲ್ಲಿ ನೂತನ ಅಧ್ಯಕ್ಷ ಆರ್.ತಿಪ್ಪೇಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ನಡೆದ ಪ್ರಥಮ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿ ನೂತನ ಸದಸ್ಯರಿಗೆ ಶುಭ ಕೋರಿ ಅಭಿವೃದ್ಧಿ ಬಗ್ಗೆ ಮಾತನಾಡಿದರು.

ಪಟ್ಟಣದ ನೆರೆಹೊರೆಯಲ್ಲಿನ 8ರಿಂದ 10 ಹಳ್ಳಿಗಳನ್ನೊಳಗೊಂಡಂತೆ ಪಟ್ಟಣ ಪಂಚಾಯಿತಿ ಮೇಲ್ದರ್ಜೆಗೆ ಪ್ರಸ್ತಾವನೆ ಸಲ್ಲಿಸಲಾಗುವುದು. 45 ಕೋಟಿ ರೂ. ವೆಚ್ಚದ ಒಳಚರಂಡಿ ನಿರ್ಮಾಣ ಮಂಜೂರಾತಿಯಾಗಿ ಡಿಪಿಆರ್ ಟೆಂಡರ್ ಪ್ರಕ್ರಿಯೆಯಲ್ಲಿದೆ. ಶೀಘ್ರ ಕಾಮಗಾರಿ ಕೈಗೊಳ್ಳಲಾಗುವುದು.

ಐತಿಹಾಸಿಕ ಕೆರೆಗೆ ನೀರು ಬರುವ ಹಿನ್ನೆಲೆಯಲ್ಲಿ ಸ್ವಚ್ಛಭಾರತ್ ಮಿಷನ್ ಅಡಿಯಲ್ಲಿ ಪಟ್ಟಣದಿಂದ ಬರುವ ಚರಂಡಿ ನೀರನ್ನು ಪ್ರತೇಕವಾಗಿ ಸಂಗ್ರಹಿಸಿ ಸಂಸ್ಕ (3ನೇ ಪುಟಕ್ಕೆ)

## ಸಿ.ಎಂ. ಕಛೇರಿಗೆ ಅಹವಾಲು ಸಲ್ಲಿಕೆಗೆ ಒಂದೇ ಮೇಲ್ ಐಡಿ

ಬೆಂಗಳೂರು, ಡಿ. 28- ಮುಖ್ಯಮಂತ್ರಿ ಕಚೇರಿಗೆ ಅಹವಾಲು ಸಲ್ಲಿಕೆ ಹಾಗೂ ಸಂವಹನಕ್ಕಾಗಿ 2021ರ ಜನವರಿ ಒಂದನೇ ದಿನಾಂಕದಿಂದ cm.kar@nic.in ಇ-ಮೇಲ್ ಐಡಿಯನ್ನು ಮಾತ್ರ ಬಳಕೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಮುಖ್ಯಮಂತ್ರಿಗಳ ಸಚಿವಾಲಯದಲ್ಲಿ 2020ರ ಆಗಸ್ಟ್ ತಿಂಗಳಿನಿಂದ ಇ-ಮೇಲ್ ಮೂಲಕ ಸ್ವೀಕೃತವಾಗುವ ಅಹವಾಲುಗಳನ್ನು ಇ-ಆಫೀಸ್ ನಲ್ಲಿಯೇ ನಿರ್ವಹಿಸಲಾಗುತ್ತಿದೆ. ಪ್ರಸ್ತುತ ಮುಖ್ಯಮಂತ್ರಿಗಳ ಸಚಿವಾಲಯವು 3 ಸಕ್ರಿಯ ಇ-ಮೇಲ್ ವಿಳಾಸಗಳನ್ನು ಹೊಂದಿದ್ದು, ಇದರಿಂದ ಅಹವಾಲು ಪುನರಾವರ್ತನೆಯಾಗುತ್ತಿದೆ ಹಾಗೂ ಅನಗತ್ಯ ಗೊಂದಲ ಉಂಟಾಗುತ್ತಿದೆ.

ಈ ಹಿನ್ನೆಲೆಯಲ್ಲಿ ಅಹವಾಲು ಸಲ್ಲಿಕೆ ಮತ್ತು (2ನೇ ಪುಟಕ್ಕೆ)

## ಶಾಲಾರಂಭದಲ್ಲಿ ಯಾವುದೇ ಬದಲಾವಣೆ ಇಲ್ಲ : ಮುಖ್ಯಮಂತ್ರಿ

ಬೆಂಗಳೂರು, ಡಿ. 28- ಈಗಾಗಲೇ ನಿಗದಿಯಾಗಿರುವಂತೆ ಜನವರಿ 1ರಿಂದ ಶಾಲಾ-ಕಾಲೇಜುಗಳು ಪ್ರಾರಂಭವಾಗಲಿದ್ದು, ಇದರಲ್ಲಿ ಯಾವುದೇ ರೀತಿಯ ಬದಲಾವಣೆ ಇಲ್ಲ ಎಂದು ಮುಖ್ಯಮಂತ್ರಿ ಯಡಿಯೂರಪ್ಪ ಸ್ಪಷ್ಟಪಡಿಸಿದ್ದಾರೆ.

ಸಚಿವ ಸಂಪುಟ ಸಭೆ ಆರಂಭಕ್ಕೂ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶಾಲಾ-ಕಾಲೇಜುಗಳನ್ನು ಜನವರಿ 1ರಿಂದ ಆರಂಭಿಸಲು ತೀರ್ಮಾನಿಸಲಾಗಿದೆ. ಈ ನಿರ್ಧಾರದಲ್ಲಿ ಹೆಚ್ಚಿನ ಬದಲಾವಣೆ ಇರುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಮೊದಲ ಹಂತದಲ್ಲಿ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ತರಗತಿಗಳು ಪ್ರಾರಂಭವಾಗಲಿವೆ.

ಗ್ರಾಮ ಪಂಚಾಯ್ತಿ ಚುನಾವಣೆಯಲ್ಲಿ ಶೇ.95ರಷ್ಟು ಬಿಜೆಪಿ ಬೆಂಬಲಿತ ಅಭ್ಯರ್ಥಿಗಳು ಗೆಲ್ಲುವುದು ನಿಶ್ಚಿತ. ಈ ಚುನಾವಣೆಗೆ (3ನೇ ಪುಟಕ್ಕೆ)



**ಸೈಟು ಮಾರಾಟಕ್ಕೆ (ಪೂರ್ವ)**
ಈ ಸೈಟು ಕೇವಲ (ಅರ್ಧ ಪರ್ಸೆಂಟ್) 1/2% ಕಮಿಷನ್‌ಗೆ ಕೊಡಿಸುತ್ತೇವೆ.
ಕರ್ನಾಟಕ ಗೃಹ ಮಂಡಳಿಯಲ್ಲಿ 60x80, 1ನೇ ಹಂತ, ಡಬಲ್ ರೋಡ್‌ಗೆ (ಕಮರ್ಷಿಯಲ್ ಆಗುವಂತಹ)
ಕಿರಣ್ ಬೂಸ್ನೂರ್ (ಏಜೆಂಟ್)
97315 63409, 98440 63409
(ಕಾಂಪ್ಲೆಕ್ಸ್, Show Room, ಮಾಲ್ (mall) ಮಾಡಲು ಸೂಕ್ತವಿದೆ)
(30x40, 30x50, 40x60, 50x80 ಸಹ ಮಾರಾಟಕ್ಕಿವೆ)

**ಸೈಟ್‌ಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಬಡಾವಣೆಯಲ್ಲಿ 30x48 ಪೂರ್ವ, ಬನಶಂಕರಿ ಬಡಾವಣೆಯಲ್ಲಿ 30x50 ಪಶ್ಚಿಮ, ವಿನಾಯಕ ಬಡಾವಣೆಯಲ್ಲಿ 40x50 ಪೂರ್ವ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟ್‌ಗಳು ಮಾರಾಟಕ್ಕಿವೆ**
ವಿನಾಯಕ ಬಡಾವಣೆಯಲ್ಲಿ, ವಿವೇಕಾನಂದ ಬಡಾವಣೆಯಲ್ಲಿ, ಸಿದ್ದವೀರಪ್ಪ ಬಡಾವಣೆಯಲ್ಲಿ 40x60 East, 80x50 west, 60x40 North, 30x50 North, 70x50 East South Corner
ಐನಹಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಸೈಟುಗಳು/ಮನೆಗಳು ಮಾರಾಟಕ್ಕಿವೆ**
ಶಿವಪಾರ್ವತಿ ಬಡಾವಣೆ 38 1/2×40 ಪಶ್ಚಿಮ, ಕುವೆಂಪು ಬಡಾವಣೆ ಮನೆಗಳು 20×48 ಪೂರ್ವ, ಆರ್.ಟಿ.ಓ. ರಿಂಗ್ ರೋಡ್ ಸರ್ಕಲ್ ಹತ್ತಿರ 40×60 ಮನೆ, ಪೂರ್ವ ದಿಕ್ಕು, ನಿಜಲಿಂಗಪ್ಪ ಬಡಾವಣೆ ಪಶ್ಚಿಮ-ಪೂರ್ವ ದಿಕ್ಕಿನ ಮನೆಗಳು/ಸೈಟುಗಳು, ಕುವೆಂಪು ಬಡಾವಣೆ ಉತ್ತರ 40×60, ಪಶ್ಚಿಮ, ಸಿದ್ದವೀರಪ್ಪ ಬಡಾವಣೆ ಪಶ್ಚಿಮ, 30×50 ಪೂರ್ವ, ಬಾಲಾಜಿ ಲೇಔಟ್ 30×40 ದಕ್ಷಿಣ, ಪೂರ್ವ ಮನೆ.
ಕೊಡುವುದಕ್ಕೂ, ತೆಗೆದುಕೊಳ್ಳುವುದಕ್ಕೂ ಸಂಪರ್ಕಿಸಿ
ಸುರೇಶ್, 95911 60520
ಐಗೂರು ವಿಜಯ್‌ಕುಮಾರ್, 99457 02495

**ಸೈಟು ಮಾರಾಟಕ್ಕೆ (ದಕ್ಷಿಣ)**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ (ಮನೆ ಕಟ್ಟಲು ತುಂಬಾ ಚೆನ್ನಾಗಿದೆ) 40x60 ದಕ್ಷಿಣ
ಬೂಸ್ನೂರ್ ಕಿರಣ್ (ಏಜೆಂಟ್)
(ನೇರವಾಗಿ ರಿಜಿಸ್ಟರ್ ಪಾರ್ಟಿಯಿಂದ ಮತ್ತು ಕೇವಲ ಅರ್ಧ ಪರ್ಸೆಂಟ್ (1/2%) ಕಮೀಷನ್ ಗೆ)
ಆಫೀಸ್ ನಂ. 97315-63409 98440-63409

**ಸೈಟ್‌ಗಳು ಮಾರಾಟಕ್ಕಿವೆ**
ಜೆ.ಹೆಚ್ ಪಟೇಲ್ ಬಡಾವಣೆಯಲ್ಲಿ 20x30 ದಕ್ಷಿಣ, ವಿನಾಯಕ ಬಡಾವಣೆಯಲ್ಲಿ 30x40 ಪಶ್ಚಿಮ
ಶಾಮನೂರು ಧನ್ಯಕುಮಾರ್
97415 62589
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟ್‌ಗಳು ಮಾರಾಟಕ್ಕಿವೆ**
40x60 East ಜೆ.ಹೆಚ್.ಪಟೇಲ್ ಬಡಾವಣೆಯಲ್ಲಿ., 30x50 South ನವೋದಯ ಸ್ಕೂಲ್ ಹತ್ತಿರ., 40x60 South, ನಿಜಲಿಂಗಪ್ಪ ಬಡಾವಣೆಯಲ್ಲಿ
ಐನಹಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಮಳಿಗೆಗಳು ಬಾಡಿಗೆಗೆ ಇವೆ**
ಹರಿಹರದಲ್ಲಿ ಬಸ್ ಸ್ಟ್ಯಾಂಡ್‌ನ ಹತ್ತಿರ ಭಾರತ್ ಆಯಿಲ್ ಮಿಲ್ ಕಾಂಪೌಂಡ್‌ನಲ್ಲಿ ಎಸ್.ಎಂ. ಲಾಡ್ಜ್ ಹತ್ತಿರ, ಮಳಿಗೆಗಳು (10x12 ಅಡಿ) ಬಾಡಿಗೆಗೆ ಇವೆ.
98444 33504

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ತರಳಬಾಳು ಬಡಾವಣೆ, ವಿದ್ಯಾನಗರ, 1ನೇ ಮೇನ್, 5ನೇ ಕ್ರಾಸ್‌ನಲ್ಲಿ (#1627/19) ಮೊದಲನೇ ಮಹಡಿಯಲ್ಲಿ 2 BHK ಮನೆ ಬಾಡಿಗೆಗೆ ಇದೆ.
94486 97842

**ಕೆಲಸಕ್ಕೆ ಬೇಕಾಗಿದ್ದಾರೆ**
ಕೆಫೆಯಲ್ಲಿ ಸಹಾಯಕರಾಗಿ ಕಾರ್ಯ ನಿರ್ವಹಿಸಲು ಮಹಿಳಾ ಮತ್ತು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಅನುಭವ ಮತ್ತು ವಿದ್ಯಾರ್ಹತೆಗಳೊಂದಿಗೆ ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ರವರೆಗೆ ಸಂಪರ್ಕಿಸಿರಿ :
97394 45691, 99809 75165

**ಮಾರಾಟಕ್ಕೆ**
DCM ಮನೆ- 30×35, ಸರಸ್ವತಿ ಬಡಾವಣೆ ಡೂಪ್ಲೆಕ್ಸ್ ಮನೆ-20×30, ಸರಸ್ವತಿ ಬಡಾವಣೆ ಮನೆ- 30×40, 20×35, ವಿನೋಬನಗರ ಮನೆ-15×30, MCC' B' ಬ್ಲಾಕ್ ಹಳೆಯ ಮನೆ - 28×64, S.S. ಲೇಔಟ್ ಮನೆ-30×40, 30×47
78996 36597
99165 25828

**ಮಹಿಳೆ ಬೇಕಾಗಿದ್ದಾರೆ**
ಬೆಳಿಗ್ಗೆ 8.30ರಿಂದ ಸಂಜೆ 5.30, ಸಂಜೆ 5.30ರಿಂದ ಬೆಳಿಗ್ಗೆ 8.30ರವರೆಗೆ ಮನೆ ಕೆಲಸದೊಂದಿಗೆ, ವಯಸ್ಸಾದವರನ್ನು ನೋಡಿಕೊಳ್ಳಲು ಮಹಿಳೆ ಬೇಕಾಗಿದ್ದಾರೆ. ಸಂಪರ್ಕಿಸಿ :
98440-63507

**ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
ಪಾಂಪ್ಲೆಟ್ಸ್ ಹಂಚಲು ಹುಡುಗರು ಬೇಕಾಗಿದ್ದಾರೆ. ಸಂಬಳ ರೂ. 4000/-ತಿಂಗಳಿಗೆ. ಸಂಪರ್ಕಿಸಿ:
79752 01572
91084 44689

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ Sales Girls, Sales Boys ಬೇಕಾಗಿದ್ದಾರೆ.
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರಸ್ತೆ, ದಾವಣಗೆರೆ-1

**ಬೇಕಾಗಿದ್ದಾರೆ**
ಮಾರ್ಕೆಟಿಂಗ್ ಮತ್ತು ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ಮಧು ಹಾರ್ಡ್‌ವೇರ್ಸ್
ಶಿವಮೊಗ್ಗ ರಸ್ತೆ, ಕದಂಬ ಲಾಡ್ಜ್ ಪಕ್ಕ, ಹರಿಹರ-577 601.
ಫೋ. : 98443 24441

**House For Rent Long Term & Short Term Available**
with all Amenities cot, bed, fan, light, UPS, internet, T.V, Dining table, Geyser, Kitchen, Stove, Gas etc.
94800 73451

**ಬೇಕಾಗಿದ್ದಾರೆ**
SSLC ಅಥವಾ PUC ಆದ ಮಹಿಳಾ ಅಭ್ಯರ್ಥಿಗಳು ಬಿಲ್ ಮಾಡಲು ಮತ್ತು ಪ್ಯಾಕ್ ಮಾಡಲು ಸಗಟು ಔಷಧಿ ಅಂಗಡಿಯಲ್ಲಿ ಬೇಕಾಗಿದ್ದಾರೆ.
ಭೇಟಿಯಾಗುವ ಸಮಯ: ಸಂಜೆ 6.30ರ ನಂತರ
ಶ್ರೀ ಗುರು ಎಂಟರ್‌ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-2

**ಮನೆ / ಖಾಲಿ ಜಾಗ ಮಾರಾಟಕ್ಕಿದೆ**
ದಾವಣಗೆರೆ ಕೆಟಿಜೆ ನಗರ 7ನೇ ಕ್ರಾಸ್ ನಲ್ಲಿ ಮನೆ ಸಂಖ್ಯೆ 1311/2ರಲ್ಲಿ 15x40 ಅಳತೆಯ ಮನೆ ಮತ್ತು 1312/1 ರಲ್ಲಿ 15x40 ಅಳತೆಯ ಖಾಲಿ ಜಾಗ ಮಾರಾಟಕ್ಕಿದೆ. ಸಂಪರ್ಕಿಸಿ :
98452-59121

**ಮನೆ ಬಾಡಿಗೆಗೆ ಇದೆ**
#600/1, 1ನೇ ಮಹಡಿ, 6ನೇ ಮೇನ್, 6ನೇ ಕ್ರಾಸ್, ಪಿ.ಜೆ. ಬಡಾವಣೆ, ದಾವಣಗೆರೆಯಲ್ಲಿ 2 ಬೆಡ್ ರೂಂ ಮನೆ ಬಾಡಿಗೆಗೆ ಇದೆ. ಸಸ್ಯಹಾರಿಗಳಿಗೆ ಮಾತ್ರ
ಫೋ. : 93539 35985

**ಡ್ಯೂಪ್ಲೆಕ್ಸ್ ಮನೆ ಮಾರಾಟಕ್ಕಿದೆ**
6BHK ಮನೆ 60x44 ವಿಸ್ತೀರ್ಣ, ಕಾರ್ ಪಾರ್ಕಿಂಗ್ ವ್ಯವಸ್ಥೆಯುಳ್ಳ, ಡ್ಯೂಪ್ಲೆಕ್ಸ್ ಮನೆ #1935/7, 10ನೇ ಕ್ರಾಸ್, ಸಿದ್ದವೀರಪ್ಪ ಬಡಾವಣೆಯಲ್ಲಿ ಮಾರಾಟಕ್ಕಿದೆ.
99007 00091

**ಕಾರ್ ಡ್ರೈವರ್ ಬೇಕಾಗಿದ್ದಾರೆ**
ಸಂಪರ್ಕಿಸಿ : 94486 56091
ಈ ಹಿಂದೆ ಮೇಲ್ಕಂಡ ನಂಬರ್‌ಗೆ ಕರೆ ಮಾಡಿದವರು ಪುನಃ ಕರೆ ಮಾಡಬೇಡಿ.

ಬೇವಿನ ಎಣ್ಣೆ, ಹ್ಯೂಮಿಕ್ ಫರ್ಟಿಲೈಸರ್ ಹಾಗೂ ಮಣ್ಣಿನ P.H. ಸಮತೋಲನ ಲಿಕ್ವಿಡ್ ದೊರೆಯುತ್ತದೆ.
ಸಂಪರ್ಕಿಸಿ:
95385 46333

**ಬೇಕಾಗಿದ್ದಾರೆ**
ಅನ್ನಪೂರ್ಣೇಶ್ವರಿ ಹೋಟೆಲ್ ಹಾಗೂ ಸರಸ್ವತಿ ಪಿ.ಜಿ.ಯಲ್ಲಿ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ.
M.B.A. ಕಾಲೇಜ್ ಹತ್ತಿರ, ಎಸ್. ಎಸ್. ಬಡಾವಣೆ.
94825 27471

**WANTED TEACHERS**
B.A., B.Ed. (Eng)
B.Sc. B.Ed. (CBZ), D.Ed / TCH.
B.Sc, B.Com, Cp.Ed - Bp.Ed
ACM SCHOOL
Devaraja Urs Lay-out, C Block, 2nd Cross, Davangere.
89703 21855, 81057 54995

**ಮಳಿಗೆ ಬಾಡಿಗೆಗಿದೆ**
ಹಳೇ ಪಿ.ಬಿ. ರಸ್ತೆ, 3ನೇ ಕ್ರಾಸ್, ಪಿಸಾಳೆ ಕಾಂಪೌಂಡ್‌ನಲ್ಲಿ ಇರುವ ಮಳಿಗೆ ಹೋಟೆಲ್ (Veg-Nonveg) ನಡೆಸಲು ಅನುಕೂಲವಿರುವ ಮಳಿಗೆ ಬಾಡಿಗೆಗಿದೆ.
97407 70399, 80739 12767

**ಸುವರ್ಣಾವಕಾಶ**
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೋಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ
8296265995, 8971684391
ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

**EXCLUSIVE CAREER OPPORTUNITY**
FOR HNI'S, Bussiness Man, Retired/ VRS From Govt/Pvt Sectors, Housewives. Unique benefits: Fixed Income + Huge Incentives+ Health Coverage+ Flexible work Timing+Gratuity+PF+Foregin Trips. Location Davanagere.
Call: 98864 28601

**ಬೇಕಾಗಿದ್ದಾರೆ**
ಕರ್ನಾಟಕದ ಬೇರೆ ಬೇರೆ ತಾಲ್ಲೂಕು ಮತ್ತು ಜಿಲ್ಲೆಗಳಲ್ಲಿ IIMS ನಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿ ಬಗ್ಗೆ ಕಾಲೇಜು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಲು ಯುವಕರು ಬೇಕಾಗಿದ್ದಾರೆ. ಸಂಬಳ : 8000+ ವಯಸ್ಸು : 18-35 ವಿದ್ಯಾರ್ಹತೆ SSLC ಮೇಲ್ಪಟ್ಟು. ಸಂಪರ್ಕಿಸಿ:
97392 30843

**ಬೇಕಾಗಿದ್ದಾರೆ**
ಕ್ಲಿನಿಕ್ ಕೆಲಸಕ್ಕೆ ನರ್ಸ್ ಬೇಕಾಗಿದ್ದಾರೆ.ಆಸಕ್ತಿ ಉಳ್ಳವರು ಸಂಪರ್ಕಿಸಿ:
73536 47383
63607 75402

**ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ**
ಸೇಲ್ಸ್‌ಮ್ಯಾನ್ ಕೆಲಸಕ್ಕೆ 10th ಪಾಸ್/ಫೇಲ್ ಆದ ಹುಡುಗ/ ಹುಡುಗಿಯರು ಬೇಕಾಗಿದ್ದಾರೆ.
ಹೀನಾ ಕಮ್ಯೂನಿಕೇಷನ್
ಸಾಗಾವಿ ಆರ್ಕೇಡ್, ಸಿ.ಪಿ. ಫ್ರೂಟ್ಸ್, ಯುಕೋ ಬ್ಯಾಂಕ್ ಹಿಂದೆ, ಎನ್.ಆರ್.ರಸ್ತೆ, ದಾವಣಗೆರೆ.
98440 08003

**ತಕ್ಷಣ ಬೇಕಾಗಿದ್ದಾರೆ**
ರೆಡಿಮೇಡ್ ಬಟ್ಟೆ ಅಂಗಡಿಯಲ್ಲ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ದಾವಣಗೆರೆಯಲ್ಲಿ ವಾಸಿಸುವವರು ಮಾತ್ರ
ಶೃತಿ ಗಾರ್ಮೆಂಟ್ಸ್
ಅಶೋಕ ರೋಡ್, ಶಾಂತಿ ಪಾರ್ಕ್ ಹತ್ತಿರ, ದಾವಣಗೆರೆ.
63606 56001
70228 43120

**CHANGE OF NAME**
I,Naveen kumari. B.R. w/o Kumar Naik A.H.residing at # 125/1859, Saraswathinagar 'C' block, Davanagere. have Changed my name as KAVYA.B.R. by virtue of our marriage before Davanagere notary on 28/08/2017. my all future dealings will be in my changed name KAVYA.B.R

**Simple vaastu**
ಸಿಂಪಲ್ ವಾಸ್ತು
98444 88838

**ಶ್ರೀ ಮೃತ್ಯುಂಜಯ ಸ್ಕೂಲ್ ಆಫ್ ನರ್ಸಿಂಗ್ & ಇನ್‌ಸ್ಟಿಟ್ಯೂಟ್ ಆಫ್ ಪ್ಯಾರಾಮೆಡಿಕಲ್ ಸೈನ್ಸಸ್**
ಪ್ರವೇಶ ಪ್ರಾರಂಭ :
ಜಿ.ಎನ್.ಎಂ. (GNM), ಲ್ಯಾಬ್ (LAB), ಹೆಲ್ತ್ (Health) ಓಟಿ (OT)
ಪಿ.ಜೆ. ಬಡಾವಣೆ, ದಾವಣಗೆರೆ.
97432 10028, 94488 73558

**ಡಾ|| ಸೋಮಶೇಖರ್. ಎಸ್.ಎ.**
Rheumatologist ಇವರು ದಿ. 31.12.2020ರ ಗುರುವಾರ ಮತ್ತು 01.01.2021ರ ಶುಕ್ರವಾರದಂದು ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292


# ಕೊರೊನಾ ಹೆಸರಿನಲ್ಲಿ ಬಿಜೆಪಿ ಸರ್ಕಾರದಿಂದ ಸಾರ್ವಜನಿಕರ ಹಣ ಲೂಟಿ



## ಕಿಡಿ ಕಾರಿದ ಹರಿಹರದ ಶಾಸಕ ಎಸ್. ರಾಮಪ್ಪ

ಹರಿಹರ, ಡಿ.28- ದೇಶದಲ್ಲಿ ಮತ್ತು ರಾಜ್ಯದಲ್ಲಿ ಆಡಳಿತ ಮಾಡುತ್ತಿರುವ ಬಿಜೆಪಿ ಸರ್ಕಾರ ಕೊರೊನಾ ಹೆಸರಿನಲ್ಲಿ ಜನರ ಹಣವನ್ನು ಲೂಟಿ ಮಾಡಲು ಹೊರಟಿದೆ ಎಂದು ಶಾಸಕ ಎಸ್. ರಾಮಪ್ಪ ಹೇಳಿದರು.

ನಗರದ ರಚನಾ ಕ್ರೀಡಾ ಟ್ರಸ್ಟ್‌ನಲ್ಲಿ ಇಂದು ನಡೆದ ಕಾಂಗ್ರೆಸ್ ಪಕ್ಷದ 136ನೇ ಸಂಸ್ಥಾಪನಾ ದಿನಾಚರಣೆ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಬಿಜೆಪಿ ಸರ್ಕಾರ ಆಡಳಿತಕ್ಕೆ ಬಂದ ನಂತರದಲ್ಲಿ ಇತ್ತೀಚೆಗೆ ಕೊರೊನಾ ಹೆಸರನ್ನು ಇಟ್ಟುಕೊಂಡು ಯಾವುದೇ ಹೊಸ ಕೆಲಸಗಳಿಗೆ ಆದ್ಯತೆ ನೀಡುವುದನ್ನು ನಿಲ್ಲಿಸಿ ಅದರಿಂದ ಬರುವ ಹಣವನ್ನು ಲೂಟಿ ಮಾಡುವುದಕ್ಕೆ ಪ್ರಾರಂಭಿಸಿದರು. ಇದರಿಂದಾಗಿ ರಾಜ್ಯದ ಜನರು ಸಾಕಷ್ಟು ಸಂಕಷ್ಟದ ಸ್ಥಿತಿ ತಲುಪಿದರು. ಎಸ್ಸಿ ಮತ್ತು ಎಸ್ಟಿ ಸೌಲಭ್ಯಗಳನ್ನು ಕಡಿತ ಮಾಡಿದರು. ರೈತರಿಗೆ ಎಪಿಎಂಸಿ ಕಾಯ್ದೆ ತಿದ್ದುಪಡಿಯನ್ನು ಜಾರಿಗೆ ತರಲು ಹೊರಟಿದ್ದಾರೆ. ಗೋ ಹತ್ಯೆ ನಿಷೇಧ ಮಾಡಲು ಹೊರಟಿದ್ದಾರೆ. ಇವರಿಗೆ ಬಡವರು ನೆಮ್ಮದಿ ಜೀವನ ನಡೆಸುವುದು ಇಷ್ಟ ಇಲ್ಲ. ತಾವು ಅಧಿಕಾರಕ್ಕೆ ಬರಬೇಕು ಎಂದು ಅನೇಕ ಬಡವರಿಗೆ ನೋವು ಕೊಡುವಂತಹ ಕೆಲಸವನ್ನು ಮಾಡಲು ಹೊರಟಿದ್ದಾರೆ. ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಬರೀ ಮಾತಿನಲ್ಲಿ ಜನರನ್ನು ಮೋಡಿ ಮಾಡಲು ಹೊರಟಿದ್ದಾರೆಯೇ ವಿನಃ ಬಡವರಿಗೆ ಯಾವುದೇ ರೀತಿಯ ಯೋಜನೆಯನ್ನು ಜಾರಿಗೆ ತರುತ್ತಿಲ್ಲ ಎಂದು ಶಾಸಕರು ಕಿಡಿ ಕಾರಿದರು.

ಹಿಂದೆ ಕಾಂಗ್ರೆಸ್ ಪಕ್ಷದ ಇಂದಿರಾ ಗಾಂಧಿಯವರ ಆಡಳಿತದ ಸಮಯದಲ್ಲಿ ಉಳುಮೆ ಮಾಡುವವನೇ ಭೂಮಿಯ ಒಡೆಯ ಎಂದು ಜಾರಿಗೆ ತಂದು ಅನೇಕ ಬಡವರ ಪರವಾದ ಕೆಲಸಗಳಿಗೆ ಆದ್ಯತೆ ನೀಡಿದರು ಮತ್ತು ಸಿದ್ದರಾಮಯ್ಯನವರ ಐದು ವರ್ಷಗಳ ಕಾಲ ಆಡಳಿತದಲ್ಲಿ ಬಡವರಿಗೆ 7 ಕೆ.ಜಿ. ಅಕ್ಕಿ ವಿತರಣೆ ಮಾಡಿದರು.

ಆದರೆ, ಬಿಜೆಪಿ ಅದನ್ನು 5 ಕೆ.ಜಿ ನೀಡುವ ಮೂಲಕ ಬಡವರು ತಿನ್ನುವ ಆಹಾರ ಕಸಿದುಕೊಂಡಿದೆ. ಬಿಜೆಪಿ ಸರ್ಕಾರ ಜಾತಿಯ ಮೇಲೆ ರಾಜಕೀಯ ಮಾಡುತ್ತಾ ಅಧಿಕಾರಕ್ಕೆ ಬಂದು ಜನರಿಗೆ ಬೇಕಾಗುವ ಸೌಲಭ್ಯಗಳನ್ನು ನೀಡುವಲ್ಲಿ ವಿಫಲವಾಗಿದೆ. ಆದ್ದರಿಂದ ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಬೇಕು ಎಂದು ಅವರು ಕರೆ ನೀಡಿದರು.

ಈ ಸಂದರ್ಭದಲ್ಲಿ ದ್ಯಾಮಪ್ಪ ಕೊಕ್ಕನೂರು, ನಿಖಿಲ್ ಕೊಂಡಜ್ಜಿ, ಎಂ. ನಾಗೇಂದ್ರಪ್ಪ, ಟಿ.ಜೆ. ಮುರುಗೇಶಪ್ಪ, ಎಲ್.ಬಿ. ಹನುಮಂತಪ್ಪ, ಅಭಿದಾಲಿ, ನಗರಸಭೆ ಸದಸ್ಯರಾದ ಶಂಕರ್ ಖಟಾವ್ಕರ್, ಸಿದ್ದೇಶ್, ಮೆಹಬೂಬ್ ಬಾಷಾ, ಬಾಬುಲಾಲ್, ಬಾಲರಾಜ್ ಮಹಮ್ಮದ್ ಫೈರೋಜ್ ಮತ್ತಿತರರು ಹಾಜರಿದ್ದರು.

# ಯೋಜನೆಗೆ ರಾಜ್ಯ ಸಂಪುಟ ಮಂಜೂರಾತಿ

(1ನೇ ಪುಟದಿಂದ) ತೆಗೆಯಲಾಗಿತ್ತು. ಆದರೆ ಅದು ಪೂರ್ಣಗೊಂಡಿರಲಿಲ್ಲ. ಅದರ ಅವಶೇಷಗಳು ಈಗಲೂ ಕಾಣಸಿಗುತ್ತವೆ. ಜೆಸಿಬಿ ಹಿಟಾಚಿ ಇಲ್ಲದ ಕಾಲದಲ್ಲಿ ಆಗಿನ ರಾಜರು ತೆಗೆಸಿದ ಈ ಕಾಲುವೆ ಮೈನವಿರೇಳಿಸುವಂತಹುದು ಎಂದು ಶ್ರೀಗಳು ಹೇಳಿದರು. ಇದೀಗ ಮತ್ತೆ ಅಲ್ಲಿನ ಕೆರೆಗಳಿಗೆ ನೀರು ಹರಿಯಲಿದೆ. ಕಳೆದ ವರ್ಷ ಫೆಬ್ರವರಿ 9 ರಂದು ನಡೆದ ತರಳಬಾಳು ಹುಣ್ಣಿಮೆ ಮಹೋತ್ಸವಕ್ಕೆ ಆಗಮಿಸಿದ್ದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರು ಕಾರ್ಯಕ್ರಮದಲ್ಲಿ ಬಹಿರಂಗವಾಗಿ ಆಶ್ವಾಸನೆ ನೀಡಿದ್ದರು. ಆ ಪ್ರಕಾರ ಆ ಭಾಗದ ಜನತೆಯ ಅನೇಕ ದಶಕಗಳ ದಾಹವನ್ನು ತಣಿಸಿದ್ದಾರೆ. ಇದರಿಂದ ಹೊಯ್ಸಳ ಸಾಮ್ರಾಜ್ಯ ಮತ್ತೆ ಉದಯಿಸಿದಂತಾಗಿದೆ ಎಂದು ಶ್ರೀಗಳು ಸಂತಸ ವ್ಯಕ್ತಪಡಿಸಿದರು.



ಬರಗಾಲದ ಪ್ರಯುಕ್ತ ಒಂದು ವರ್ಷ ಕಾಲ ಮುಂದೂಡಲಾಗಿದ್ದ ತರಳಬಾಳು ಹುಣ್ಣಿಮೆ ಮಹೋತ್ಸವವನ್ನು ಹಳೇಬೀಡು ಕೆರೆ ತುಂಬಿಸಿದ ಮೇಲೆಯೇ ಆಚರಿಸಬೇಕೆಂಬ ನಮ್ಮ ಸತ್ಯ ಸಂಕಲ್ಪ ಈಡೇರಿದಂತಾಗಿದೆ.

ಹುಣ್ಣಿಮೆಯ ಮೊದಲೂ ಹಳೇಬೀಡು ಕೆರೆ ತುಂಬಿತು. ಹುಣ್ಣಿಮೆಯ ನಂತರವೂ ತುಂಬಿ ತುಳುಕಿದೆ. ಮುಂದೆ ಶಾಶ್ವತವಾಗಿ ತುಂಬಿ ರೈತರ ಮತ್ತು ಪ್ರವಾಸಿಗರ ಕಣ್ಮನ ಸೆಳೆಯುತ್ತದೆ ಎಂದು ಆಶಯ ವ್ಯಕ್ತಪಡಿಸಿದ ಶ್ರೀಗಳು, ಹಳೆಬೀಡು ಭಾಗದ ಜನತೆಯ ಪರವಾಗಿ ಶ್ರೀಗಳು ಮುಖ್ಯ ಮಂತ್ರಿಗಳಿಗೆ ಅಭಿನಂದಿಸುವುದಾಗಿ ಹೇಳಿದರು.


|| ಹಂಪಿ ವಿರೂಪಾಕ್ಷೇಶ್ವರ ಪ್ರಸನ್ನ ||



**ತೃತೀಯ ಪುಣ್ಯಸ್ಮರಣೆ**
ದಿ|| ಶ್ರೀಮತಿ ಗಿರಿಜ ಎಂ. ಜವಳಿ
ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳಾದವು.
ಸದಾ ನಿಮ್ಮ ನೆನಪಿನಲ್ಲಿರುವ....
ಪತಿ : ಮಂಜುನಾಥ ಎ. ಜವಳಿ ಮತ್ತು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು, ದಾವಣಗೆರೆ. ಮೊ: 98445 73023

**ಆಹಾರ್ 2000**
ಕೋವಿಡ್ 19 ಪ್ರಯುಕ್ತ ಆಹಾರ್ 2000 ಕೇಕ್ ಪ್ರದರ್ಶನವನ್ನು ರದ್ದುಗೊಳಿಸಲಾಗಿದೆ. ಕೇಕ್ ಮಾರಾಟವು ಎಂದಿನಂತೆ ನಡೆಯುತ್ತದೆ.
ವ್ಯವಸ್ಥಾಪಕರು

**ಹನ್ನೆರಡನೇ ವರ್ಷದ ಪುಣ್ಯಸ್ಮರಣೆ**



ದಿ|| ಕೆ.ಎಸ್. ರೇವಣಸಿದ್ದಪ್ಪ ಬಸಾಪುರ
ಲಿಂಗೈಕ್ಯ : 29.12.2008
ಮಾಜಿ ಅಧ್ಯಕ್ಷರು, ಶ್ರೀಮದ್ ಸಾಧು ಸದ್ಧರ್ಮ ವೀರಶೈವ ಸಂಘ, (ರಿ.) ದಾವಣಗೆರೆ ತಾ|| ಘಟಕ.
ನಿಮ್ಮ ಚಿಂತನೆ, ಆದರ್ಶಗಳು ನಮಗೆ ದಾರಿದೀಪ
ಸದಾ ನಿಮ್ಮ ಸ್ಮರಣೆಯಲ್ಲಿರುವ....
ಬಿ. ಸಿದ್ದನಗೌಡ ಮತ್ತು ಸಹೋದರರು ಹಾಗೂ ಸಹೋದರಿ ಮಕ್ಕಳು, ಮೊಮ್ಮಕ್ಕಳು ಹಾಗೂ ಶಿಕ್ರಪ್ಪಳ ವಂಶಸ್ಥರು ಬಸಾಪುರ, ಬೇತೂರು, ಬಿ.ಕಲಪನಹಳ್ಳಿ.

**ಬೇಕಾಗಿದ್ದಾರೆ**
ತಿಂಗಳಿಗೆ 10 ಲಕ್ಷದವರೆಗೆ ತೆಂಗಿನಕಾಯಿ ಸರಬರಾಜು ಮಾಡುವವರು ಬೇಕಾಗಿದ್ದಾರೆ (ವಾರಕ್ಕೆ 2.50 ಲಕ್ಷದಂತೆ)
72048 65251

**ಐಗೂರು ಗುರುಮಲ್ಲಪ್ಪರ ಸಿದ್ದಮ್ಮ ನಿಧನ**




ದಾವಣಗೆರೆ ತಾಲ್ಲೂಕು ಐಗೂರು ವಾಸಿ ದಿ. ಗುರುಮಲ್ಲಪ್ಪ ಚಂದ್ರಶೇಖರಪ್ಪ ಅವರ ಧರ್ಮಪತ್ನಿ ಶ್ರೀಮತಿ ಸಿದ್ದಮ್ಮ (70) ಅವರು ದಿನಾಂಕ 28.12.2020ರ ಸೋಮವಾರ ಸಂಜೆ 5.30 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತಂಗಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 29.12.2020ರ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ಐಗೂರಿನ ಮೃತರ ಜಮೀನಿನಲ್ಲಿ ನಡೆಯಲಿದೆ.
ದುಃಖತಪ್ತ ಕುಟುಂಬ ವರ್ಗ
ಮೊ. 8971562704, 7975266790

**Wanted**
We need female computer faculty-01, Office work-01. (Any degree, 1 computer course) Attractive salary at Davangere.
Call-97392 30843

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಕುರುವತ್ತಿ ಹಾಲಿನ ಮಂಜಣ್ಣ ನಿಧನ**



ದಾವಣಗೆರೆ ತಾಲ್ಲೂಕು ತೋಳಹುಣಸೆ ಗ್ರಾಮದ ವಾಸಿ
ಕುರುವತ್ತಿ ಹಾಲಿನ ಮಂಜಣ್ಣ (80)
ಅವರು ದಿನಾಂಕ 28.12.2020 ರಂದು ಸೋಮವಾರ ಸಂಜೆ 7.30 ಕ್ಕೆ ನಿಧನರಾಗಿದ್ದಾರೆ. ಪತ್ನಿ, ಇಬ್ಬರು ಪುತ್ರ, ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 29.12.2020ರ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ತೋಳಹುಣಸೆ ಗ್ರಾಮದಲ್ಲಿ ನೆರವೇರಿಸಲಾಗುವುದು.
ದುಃಖತಪ್ತ ಕುಟುಂಬ ವರ್ಗ :- 96639 30421

**ಕುಣೆಬೆಳಕೆರೆ: ಸುಂಕದಾರ ನಾಗಮ್ಮ ನಿಧನ**



ಹರಿಹರ ತಾಲ್ಲೂಕು ಕುಣೆಬೆಳಕೆರೆ ಗ್ರಾಮದ ದಿ. ಸುಂಕದಾರ ಸಿದ್ದಪ್ಪ ಅವರ ಧರ್ಮಪತ್ನಿ ಹಾಗೂ ದೇವರಬೆಳಕೆರೆ ಮಂಡಲ ಪಂಚಾಯ್ತಿ ಮಾಜಿ ಸದಸ್ಯರಾದ ಶ್ರೀಮತಿ ಸುಂಕದಾರ ನಾಗಮ್ಮ ಅವರು ದಿನಾಂಕ 28.12.2020ರ ಸೋಮವಾರ ಸಂಜೆ 4 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 85 ವರ್ಷ ವಯಸ್ಸಾಗಿತ್ತು. ಮೂವರು ಪುತ್ರರು, ಐವರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 29.12.2020ರ ಮಂಗಳವಾರ ಮಧ್ಯಾಹ್ನ 1 ಗಂಟೆಗೆ ಕುಣೆಬೆಳಕೆರೆ ಗ್ರಾಮದಲ್ಲಿರುವ ಅವರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.
-ದುಃಖತಪ್ತ ಕುಟುಂಬ ವರ್ಗ

**ಎಂ.ಬಿ ನಾಗರಾಜಪ್ಪ (ಪೋಸ್ಟ್ ಮಾಸ್ಟರ್ ) ನಿಧನ**



ದಾವಣಗೆರೆ ತಾಲ್ಲೂಕು ಹಳೇ ಬೆಳವನೂರು ಗ್ರಾಮದ ವಾಸಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಎಂ.ಬಿ. ನಾಗರಾಜಪ್ಪ (ಪೋಸ್ಟ್ ಮಾಸ್ಟರ್) (68) ಇವರು ದಿನಾಂಕ 28.12.2020 ರ ಸೋಮವಾರ ರಾತ್ರಿ 11ಕ್ಕೆ ನಿಧನರಾಗಿದ್ದಾರೆ. ಪತ್ನಿ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 29.12.2020ರ ಮಂಗಳವಾರ ಮಧ್ಯಾಹ್ನ 1.00 ಗಂಟೆಗೆ ಬೆಳವನೂರಿನ ರುದ್ರಭೂಮಿಯಲ್ಲಿ ನೆರವೇರಲಿದೆ.
ಇಂತಿ ದುಃಖತಪ್ತ ಕುಟುಂಬ ವರ್ಗ
ಮೊ: 69115 49578


# ಯುವಕನ ಮೇಲೆ ಕರಡಿ ದಾಳಿ




ಕೂಡ್ಲಿಗಿ, ಡಿ.28 - ಕೂಡ್ಲಿಗಿ ಪಟ್ಟಣ ಪಂಚಾಯ್ತಿ ವ್ಯಾಪ್ತಿಯ ಕೆ.ಕೆ.ಹಟ್ಟಿ ಹೊರ ವಲಯದಲ್ಲಿ ಇಂದು ಬೆಳಿಗ್ಗೆ ಬಹಿರ್ದೆಸೆಗೆಂದು ಹೋದವರ ಮೇಲೆ ಕರಡಿ ದಾಳಿ ಮಾಡಿರುವ ಘಟನೆ ಜರುಗಿದೆ.

ಕಾಳಿಂಗೇರಿ ನಾಗರಾಜ ಹಾಗೂ ವೆಂಕಟೇಶ ಎಂಬುವವರ ಮೇಲೆ ಕರಡಿ ದಾಳಿ ಮಾಡಿದೆ. ಗಂಭೀರವಾಗಿ ಗಾಯಗೊಂಡ ಕಾಳಿಂಗೇರಿ ನಾಗರಾಜನನ್ನು ಬಳ್ಳಾರಿ ವಿಮ್ಸ್‌ಗೆ ರವಾನಿಸಲಾಗಿದೆ.

**ಕರಡಿ ಸೆರೆ ಹಿಡಿಯುವಂತೆ ರೈತರ ಆಗ್ರಹ :** ಕೂಡ್ಲಿಗಿ ಕೆ.ಕೆ.ಹಟ್ಟಿ ಹಾಗೂ ಸುತ್ತ ಮುತ್ತ ಗ್ರಾಮಗಳಲ್ಲಿ ಕರಡಿ ಬಹುದಿನಗಳಿಂದಲೂ ಗೋಚರಿಸುತ್ತಿದ್ದು, ಗ್ರಾಮಸ್ಥರು ರೈತರು ತೀವ್ರ ಆತಂಕದಿಂದ ಜೀವಿಸುವಂತಾಗಿದೆ. ಕಾರಣ ಶೀಘ್ರವೇ ಕರಡಿಯನ್ನು ಸೆರೆ ಹಿಡಿದು ಗುಡೇಕೋಟೆ ಕರಡಿಧಾಮಕ್ಕೆ ಬಿಡಬೇಕಿದೆ ಎಂದು ರೈತ ಸಂಘದ ಜಿಲ್ಲಾಧ್ಯಕ್ಷ ದೇವರಮನೆ ಮಹೇಶ್ ನೇತೃತ್ವದಲ್ಲಿ ಗ್ರಾಮಗಳ ಗ್ರಾಮಸ್ಥರು, ರೈತರು ತಾಲ್ಲೂಕು ಆಡಳಿತಕ್ಕೆ ಈ ಮೂಲಕ ಒತ್ತಾಯಿಸಿದ್ದಾರೆ.

# ಕನಗೊಂಡನಹಳ್ಳಿಯಲ್ಲಿಂದು ಕಾರ್ತಿಕ



ದಾವಣಗೆರೆ ತಾಲ್ಲೂಕಿನ ಕನಗೊಂಡನಹಳ್ಳಿ ಗ್ರಾಮದ ಶ್ರೀ ಮರಡಿ ಕೆಂಚಮ್ಮ ದೇವಿ ಕಾರ್ತಿಕೋತ್ಸವವು ಇಂದು ನಡೆಯಲಿದೆ. ಶ್ರೀ ಆಂಜನೇಯ ಸ್ವಾಮಿ ಕಾರ್ತಿಕೋತ್ಸವವು ಜ.2 ರಂದು ನಡೆಯಲಿದೆ. ಜ. 5 ರಂದು ಮಹೇಶ್ವರ ಜಾತ್ರೆ ನಡೆಯಲಿದೆ.

# ಅಹವಾಲು ಸಲ್ಲಿಕೆಗೆ ಒಂದೇ ಮೇಲ್

(1ನೇ ಪುಟದಿಂದ) ನಿರ್ವಹಣೆಯನ್ನು ಸರಳಗೊಳಿಸಲು ಏಕ ವಿಳಾಸವನ್ನು ಬಳಕೆ ಮಾಡಲು ನಿರ್ಧರಿಸಲಾಗಿದೆ. ಸಾರ್ವಜನಿಕರು ಈ ಬದಲಾವಣೆಯನ್ನು ಗಮನಿಸಿ, ಮುಂದಿನ ದಿನಗಳಲ್ಲಿ ತಮ್ಮ ಅಹವಾಲು ಮತ್ತು ಇತರೆ ಸಂವಹನವನ್ನು cm.kar@nic.in ಮೇಲ್ ಐಡಿ ಮೂಲಕವೇ ಮಾಡುವಂತೆ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಗಳು ತಿಳಿಸಿದ್ದಾರೆ.

# ಹರಪನಹಳ್ಳಿ : ಸಕ್ರಿ ಪ್ರಕಾಶ್ ಸಾವು




ಹರಪನಹಳ್ಳಿ, ಡಿ.28 - ಗ್ರಾಮ ಪಂಚಾಯ್ತಿ ಚುನಾವಣೆಯ ಕರ್ತವ್ಯದಲ್ಲಿರುವಾಗ ಶೌಚಾಲಯಕ್ಕೆ ಹೋದಾಗ ಕಾಲು ಜಾರಿ ಬಿದ್ದು ಸಾವಿಗೀಡಾಗಿರುವ ಘಟನೆ ತಡವಾಗಿ ಬೆಳಕಿಗೆ ಬಂದಿದೆ. ಮೂಲತಃ ತೆಲಗಿ ಗ್ರಾಮದ ಪ್ರೌಢಶಾಲಾ ಶಿಕ್ಷಕ ಸಕ್ರಿ ಪ್ರಕಾಶ್ ಕೊಟ್ಟೂರು ತಾಲ್ಲೂಕಿನ ಚಿರಬಿ ಪ್ರೌಢಶಾಲೆಯಲ್ಲಿ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದು, ಗ್ರಾಮ ಪಂಚಾಯ್ತಿ ಚುನಾವಣೆಯ ನಿಮಿತ್ತ ಬೇವೂರು ಗ್ರಾಮ ಪಂಚಾಯ್ತಿಯ ಪಿ.ಆರ್.ಓ ಆಗಿ ಕೆಲಸ ನಿರ್ವಹಿಸುವಾಗ ಈ ಘಟನೆ ಜರುಗಿದೆ. ಜಿಲ್ಲಾ ಚುನಾವಣಾಧಿಕಾರಿಗಳು ಈ ಬಗ್ಗೆ ತನಿಖೆ ನಡೆಸಿ ಕುಟುಂಬಸ್ಥರಿಗೆ ಅಗತ್ಯ ನೆರವು ನೀಡಬೇಕೆಂದು ತೆಲಗಿ ಗ್ರಾಮಸ್ಥರು ಒತ್ತಾಯಿಸಿದ್ದಾರೆ.


**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ
S.S.L.C., PUC, Technical & Non Technical Courses, Pharmacy & BHMS (Goverment & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ರಾಂ ಅಂಡ್ ಕೋ ಸರ್ಕಲ್, ಸೋಮ ಮೆಡಿಕಲ್ಸ್ ಮೇಲೆ ಗಣೇಶ ದೇವಸ್ಥಾನದ ಹಿಂಭಾಗ, ದಾವಣಗೆರೆ.
87490 24789, 94837 64859, 87620 58369
82173 02649, 80507 27467

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ.1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ:
ಗಾಂಧಿ ಸರ್ಕಲ್, ದಾವಣಗೆರೆ.
89716 99826

## ರಾಷ್ಟ್ರ ಕವಿಗೆ ನಮನ



ಬೀರಿದರು ಕನ್ನಡದ
ಕಸ್ತೂರಿಯ ಕಂಪು
ಕರುನಾಡ ಕಣ್ಮಣಿ
ರಾಷ್ಟ್ರ ಕವಿ ಕುವೆಂಪು
ಮಲೆನಾಡ ಕವಿಯು
ಕನ್ನಡದ ಹಿರಿಮೆ
ಕಾವ್ಯಧಾರೆ ಹರಿಸುತ ತೋರಿಸಿದರು ಒಲುಮೆ.

ಬಾರಿಸಿದರು ರಸ ಋಷಿ ಕನ್ನಡದ ಡಿಂಡಿಮ
ಸಾರಸ್ವತ ಲೋಕಕೆ ಇವರ ಸೇವೆ ಅನುಪಮ
ಜೈ ಭಾರತ ಜನನಿಯ ತನುಜಾತೆಯನ್ನು
ಪೂಜಿಸುತ ಪಡೆದರು ಅವಳ ಕೃಪೆಯನ್ನು.

ಕನ್ನಡಕೆ ಕೈ ಎತ್ತಿ ಕಲ್ಪವೃಕ್ಷವಾಗಿಹರು
ಕರುನಾಡಿಗೆ ಕೊರಳೆತ್ತಿ ಪಾಂಚಜನ್ಯ
ಮೊಳಗಿಸಿದರು
ಹರಿಸಿದರು ಕನ್ನಡದಲಿ ಕಾವ್ಯಧಾರೆಯ
ಧರಿಸಿದರು ಪ್ರಶಸ್ತಿಗಳ ಸರಮಾಲೆಯ.

'ಜ್ಞಾನಪೀಠ'ವ ಪಡೆದ 'ರಾಮಾಯಣ ದರ್ಶನ'
ನೀಡುವುದು ಮನುಜರಿಗೆ ಮಾರ್ಗದರ್ಶನ
ಆಗುವುದು ನಮಗೆಲ್ಲ ಶ್ರೀ ರಾಮನ ದರುಶನ
ಅದನೋದಿದಾಗಲೇ ನಮ್ಮ ಬದುಕು ಪಾವನ.

ಭೂಷಣಕೆ ಭೂಷಣ 'ಪದ್ಮಭೂಷಣ'
'ಕರ್ನಾಟಕ ರತ್ನ'ನಿಗೆ ಇದು ಸಂದ ಕಾರಣ
'ಯುಗದ ಕವಿ ಜಗದ ಕವಿ' ಕನ್ನಡದ ಚೇತನ
ವಿಶ್ವಮಾನವತೆಯ ಸಾರಿದ ಕವಿಗೆ
ಇದೋ ನಮ್ಮ ನಮನ.

- **ಜಿ.ಎಸ್.ಗಾಯತ್ರಿ,** ಶಿಕ್ಷಕಿ, ಬಾಪೂಜಿ ಶಾಲೆ, ಹರಿಹರ.

# ಎಲ್ಲರಲ್ಲೂ 'ಎನಗಿಂತ ಕಿರಿಯರಿಲ್ಲ' ಎಂಬ ಭಾವನೆ ಅಗತ್ಯ : ಡಿಸಿ ಬೀಳಗಿ

ದಾವಣಗೆರೆ, ಡಿ.28- 'ಎನಗಿಂತ ಕಿರಿಯರಿಲ್ಲ' ಎಂಬ ಭಾವನೆಯನ್ನು ಹೊಂದಬೇಕು ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು ಪ್ರತಿಪಾದಿಸಿದರು.

ಇಲ್ಲಿನ ಗಾಂಧಿ ನಗರದಲ್ಲಿ ಶ್ರೀ ಗುರು ರಾಮದಾಸ ಸ್ವಾಮಿ ಅಧ್ಯಾತ್ಮ ಮಂದಿರದ ವತಿಯಿಂದ ಇಂದು ಏರ್ಪಡಿಸಿದ್ದ ಸಾಮೂಹಿಕ ವಿವಾಹ ಮಹೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ನಾನು ಜಿಲ್ಲಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡ ದಿನದಿಂದ ಸಮಾಜಮುಖಿಯಾಗಿ, ಜನಪರವಾಗಿ ಸೇವೆ ಸಲ್ಲಿಸುತ್ತಿದ್ದೇನೆ ಎಂದು ತಿಳಿಸಿದರು. ಕಛೇರಿಯಲ್ಲಿ ಕೇವಲ ಫೈಲ್‌ಗಳನ್ನು ನೋಡುತ್ತಾ ಕುಳಿತುಕೊಳ್ಳುವ ಜಿಲ್ಲಾಧಿಕಾರಿ ನಾನಲ್ಲ, ಜಿಲ್ಲೆಯಾದ್ಯಂತ ಸಂಚರಿಸಿ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಜಿಲ್ಲಾಧಿಕಾರಿ ನಾನು ಎಂದು ಸ್ಪಷ್ಟಪಡಿಸಿದರು. ದಾಂಪತ್ಯ ಜೀವನಕ್ಕೆ ಕಾಲಿಟ್ಟ ನೂತನ ದಂಪ ತಿಗಳು ತಮ್ಮ ಜೀವನದಲ್ಲಿ ಕಷ್ಟ-ಸುಖವನ್ನು ಸಮಾನವಾಗಿ ಹಂಚಿಕೊಳ್ಳಬೇಕೆಂದು ಆಶಿಸಿದರು.

ಕಮ್ಯೂನಿಸ್ಟ್ ಪಕ್ಷದ ಹಿರಿಯ ಮುಖಂಡ ಹೆಚ್.ಕೆ. ರಾಮಚಂದ್ರಪ್ಪ ಮಾತನಾಡಿ, ಒಳ್ಳೆಯ ಕೆಲಸವನ್ನು ಮಾಡಲು ಹೊರಟವರಿಗೆ ವಿಘ್ನಗಳು ಎದುರಾಗುತ್ತವೆ. ಡಾ ಅಂಬೇಡ್ಕರ್ ತಮಗೆ ಎದುರಾದ ಅನೇಕ ಅಡ್ಡಿ-ಆತಂಕಗಳನ್ನು ಮೆಟ್ಟಿ ನಿಂತು ದೇಶಕ್ಕೆ ಪವಿತ್ರವಾದ ಸಂವಿಧಾನವನ್ನು ನೀಡಿದರು ಎಂದು ವಿಶ್ಲೇಷಿಸಿದರು .

ನಗರದ ಹಳೆಯ ಭಾಗದಲ್ಲಿರುವ ರುದ್ರಭೂಮಿಯಲ್ಲಿ ವಿದ್ಯುತ್ ಚಿತಾಗಾರವನ್ನು ನಗರಪಾಲಿಕೆ ಒದಗಿಸಬೇಕು ಎಂದು ಅವರು ಒತ್ತಾಯಿಸಿದರು.

ಇಂದು ವೈದಿಕತೆಗಿಂತ ವೈಚಾರಿಕತೆ ಶ್ರೇಷ್ಠವಾಗಿದೆ, ಬುದ್ಧ, ಬಸವಣ್ಣ, ಅಂಬೇಡ್ಕರ್ ಮುಂತಾದ ದಾರ್ಶನಿಕರು ವೈಚಾರಿಕತೆಯನ್ನೇ ಪ್ರತಿಪಾದಿಸಿದ್ದಾರೆ ಎಂದು ಹೇಳಿದರು.

ವೈಚಾರಿಕತೆಗಿಂತ ವಿದಾಯಕತೆಗೂ ಹೆಚ್ಚಿನ ಪ್ರಾಮುಖ್ಯತೆ ಇದೆ. ಸಮಾಜಮುಖಿಯಾಗಿ ರಚನಾತ್ಮಕ ಕಾರ್ಯವನ್ನು ಮಾಡಬೇಕು ಎಂದರು.

ಚಿತ್ರದುರ್ಗದ ಶ್ರೀ ಮಾದಾರ ಚೆನ್ನಯ್ಯ ಸ್ವಾಮೀಜಿ, ಹಾವೇರಿಯ ಶ್ರೀ ಬಸವ ಶಾಂತಲಿಂಗ ಸ್ವಾಮೀಜಿ ಆಶೀರ್ವಚನ ನೀಡಿದರು.

ಮುಖ್ಯ ಅತಿಥಿಗಳಾಗಿ ಮಾಜಿ ಸಚಿವ ಹೆಚ್. ಆಂಜನೇಯ, ಶಾಸಕ ಲಿಂಗಣ್ಣ, ಮಹಾನಗರಪಾಲಿಕೆ ಮಹಾಪೌರ ಬಿ.ಜಿ. ಅಜಯಕುಮಾರ್, ನಗರಪಾಲಿಕೆ ಸದಸ್ಯರಾದ ದೇವರಮನೆ ಶಿವಕುಮಾರ್, ಎಸ್.ಟಿ. ವೀರೇಶ್, ಮಾಜಿ ಸದಸ್ಯ ಎಂ. ಹಾಲೇಶ್, ಪೌರ ಕಾರ್ಮಿಕರ ಸಂಘದ ಅಧ್ಯಕ್ಷ ಎಲ್.ಎಂ. ಹನುಮಂತಪ್ಪ, ಅಧ್ಯಾತ್ಮಿಕ ಮಂದಿರದ ಬಿ.ಎಂ. ರಾಮಸ್ವಾಮಿ, ಬಿ.ಎಂ. ಈಶ್ವರ್ ಮತ್ತಿತರರು ಆಗಮಿಸಿದ್ದರು.

ಅಧ್ಯಾತ್ಮ ಮಂದಿರದ ಅಧ್ಯಕ್ಷ ಬಿ.ಹೆಚ್. ವೀರಭದ್ರಪ್ಪ ಸ್ವಾಗತಿಸಿದರು. ಕಾರ್ಯಕ್ರಮವನ್ನು ಅಗಡಿ ಅವರು ನಿರೂಪಿಸಿದರು. ಬಿ. ಎಂ. ಈಶ್ವರ್ ವಂದಿಸಿದರು.

### ಶ್ರೀಮಂತರೂ ಸಾಮೂಹಿಕ ವಿವಾಹದಲ್ಲಿ...

ಹಿಂದೆ ಬಡವರು ಮಾತ್ರ ಸಾಮೂಹಿಕ ವಿವಾಹದಲ್ಲಿ ಭಾಗವಹಿಸುತ್ತಿದ್ದರು. ಆದರೆ, ಇಂದು ಶ್ರೀಮಂತರೂ ಸಹಾ ತಮ್ಮ ಮಕ್ಕಳಿಗೆ ಸಾಮೂಹಿಕ ವಿವಾಹ ಮಹೋತ್ಸವದಲ್ಲಿ ಮದುವೆ ಮಾಡಿಸುತ್ತಿದ್ದಾರೆ. ನನ್ನ ಹೆಣ್ಣು ಮಕ್ಕಳನ್ನು ಸಾಮೂಹಿಕ ವಿವಾಹ ದಲ್ಲಿಯೇ ಮದುವೆ ಮಾಡಿಸಿದ್ದೇನೆ. ದುಂದು ವೆಚ್ಚವಿಲ್ಲದ ಸರಳ ರೀತಿಯ ಸಾಮೂಹಿಕ ವಿವಾಹ ಮಹೋತ್ಸವಗಳಿಗೆ ಹೆಚ್ಚು ಒತ್ತು ನೀಡಬೇಕು.

**-ಹೆಚ್.ಆಂಜನೇಯ,** ಮಾಜಿ ಸಚಿವರು



## ಮಾತುಕತೆಗೆ ಕರೆದ ಸರ್ಕಾರ

**(1ನೇ ಪುಟದಿಂದ)** ಸಭೆಗೆ ಬರುವಂತೆ ಕೃಷಿ ಸಚಿವಾಲಯದ ಕಾರ್ಯದರ್ಶಿ ಸಂಜಯ್ ಅಗರ್‌ವಾಲ್ ಅವರು ರೈತ ಸಂಘಗಳಿಗೆ ಪತ್ರ ಮುಖೇನ ತಿಳಿಸಿದ್ದಾರೆ. ಸುಮಾರು ಒಂದು ತಿಂಗಳಿನಿಂದ ಹರಿ ಯಾಣ, ಪಂಜಾಬ್ ಹಾಗೂ ಉತ್ತರ ಪ್ರದೇಶದ ಸಾವಿರಾರು ರೈತರು ದೆಹಲಿಯ ಗಡಿ ಪ್ರದೇಶಗಳಲ್ಲಿ ಪ್ರತಿಭಟನೆ ನಡೆಸುತ್ತಿದ್ದಾರೆ. ಮೂರೂ ಕೃಷಿ ಕಾಯ್ದೆಗಳನ್ನು ರದ್ದುಪಡಿಸುವಂತೆ ಆಗ್ರಹಿಸಿದ್ದಾರೆ. ಬೇಡಿಕೆಗಳು ಈಡೇರದಿದ್ದರೆ ಪ್ರತಿಭಟನೆಯನ್ನು ಮತ್ತಷ್ಟು ತೀಕ್ಷ್ಣಗೊಳಿಸುವುದಾಗಿ ರೈತ ಸಂಘಟನೆಗಳು ಎಚ್ಚರಿಕೆ ನೀಡಿವೆ.

## ನಗರದಲ್ಲಿ ಇಂದು ವೀರಭದ್ರೇಶ್ವರ ಕಾರ್ತಿಕ



ಲಕ್ಷ್ಮಿ ಫ್ಲೋರ್ ಮಿಲ್ ಹತ್ತಿರವಿರುವ ಶ್ರೀ ಮಹಾಗಣಪತಿ, ಶ್ರೀ ವೀರಭದ್ರೇಶ್ವರ ಸ್ವಾಮಿಯ ಕಾರ್ತಿಕ ದೀಪೋತ್ಸವವು ಇಂದು ಸಂಜೆ 7 ಕ್ಕೆ ಜರುಗಲಿದೆ. ಅಂದು ಬೆಳಿಗ್ಗೆ ಅಭಿಷೇಕ, ಹೂವಿನ ಅಲಂಕಾರ, ಮಹಾಪೂಜೆ ನಡೆಯಲಿದೆ ಎಂದು ವೀರಯ್ಯ ಸ್ವಾಮಿ ತಿಳಿಸಿದ್ದಾರೆ.

## ಗ್ರಾಹಕರ ಮೆಚ್ಚುಗೆಗೆ ಪಾತ್ರವಾಗಿರುವ ಕನಕ ಬ್ಯಾಂಕ್



**(4ನೇ ಪುಟದಿಂದ)** ಮಂಡಳಿಯ ಇಚ್ಛಾಶಕ್ತಿ ಕಾರಣವಾಗಿದೆ ಎಂದು ತಿಳಿಸಿದ ಸಿದ್ದಪ್ಪ ಅವರು, ಬ್ಯಾಂಕಿನ ಅಭಿವೃದ್ಧಿಗೆ ಸಹಕರಿಸುತ್ತಿರುವ ಎಲ್ಲರನ್ನೂ ಸ್ಮರಿಸಿ, ಕೃತಜ್ಞತೆ ಸಲ್ಲಿಸಿದರು.

**ಗ್ರಾಹಕರ ಪಾತ್ರ ಪ್ರಮುಖ :** ಬ್ಯಾಂಕಿನ ಮಾಜಿ ಅಧ್ಯಕ್ಷರೂ ಆದ ಹಾಲಿ ನಿರ್ದೇಶಕ ಪಿ. ರಾಜಕುಮಾರ್ ಮಾತನಾಡಿ, ಈ ಬ್ಯಾಂಕ್ ಸರ್ವತೋಮುಖ ಅಭಿವೃದ್ಧಿಯಲ್ಲಿ ಗ್ರಾಹಕರು ಮತ್ತು ಸದಸ್ಯರ ಸಹಕಾರ ಮತ್ತು ಪ್ರೋತ್ಸಾಹ ಪ್ರಮುಖ ಪಾತ್ರ ವಹಿಸಿದೆ ಎಂದು ಸ್ಮರಿಸಿದರು.

ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀಮತಿ ಕೆ.ಜಿ. ತಾಯಮ್ಮ ಮಾತನಾಡಿ, ಬ್ಯಾಂಕಿನ ಪ್ರಗತಿಯಲ್ಲಿ ಗ್ರಾಹಕರ ಮತ್ತು ಸಹದಸ್ಯರ ಸಹಕಾರ ಹಾಗೂ ಪ್ರೋತ್ಸಾಹ ಇದೆ ಎಂದು ಧನ್ಯವಾದ ಹೇಳಿದರು.

ನಿರ್ದೇಶಕರುಗಳಾದ ಕೆ.ಎನ್. ನೀಲಪ್ಪ, ಆರ್. ಆನಂದ್, ಹೆಚ್.ಜಿ. ಸಂಗಪ್ಪ, ಚೌಡಪ್ಪ, ಎಸ್. ಸಂಗನಗೌಡ್ರು, ಕೆ. ಪರಶುರಾಮ್, ಕೆ.ಆರ್. ಭರಮಪ್ಪ, ಬಿ. ದಿಳ್ಯಪ್ಪ, ಹೆಚ್.ಎಂ. ಗೋಣೆಪ್ಪ, ಎಸ್. ಹೆಚ್. ಕಾಂತರಾಜ್, ಟಿ.ಎಸ್. ಪ್ರಕಾಶ್, ಶ್ರೀಮತಿ ಕೆ. ಸುಧಾ, ಮಹಾದೇವಪ್ಪ, ಕೆ. ರೇವಣಸಿದ್ದಪ್ಪ ಮತ್ತಿತರರು ಸಮಾರಂಭದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಬ್ಯಾಂಕಿನ ಪ್ರಭಾರ ವ್ಯವಸ್ಥಾಪಕರಾಗಿರುವ ಲೆಕ್ಕಾಧಿಕಾರಿ ದೇವಜ್ಜಿ ರಮೇಶ್ ಅವರು 2020-21 ನೇ ಸಾಲಿನ ಆಯ-ವ್ಯಯ ಮಂಡಿಸಿದರು.

ಹಿರಿಯ ಸಹಾಯಕರಾದ ಶ್ರೀಮತಿ ಕೆ.ಎಸ್. ರೇಣುಕ, ಶ್ರೀಮತಿ ಬಿ.ಕೆ. ವಿಜಯ, ಸಹಾಯಕ ಲೆಕ್ಕಿಗರಾದ ಶ್ರೀಮತಿ ಕೆ. ರೇಖಾ, ಕಿರಿಯ ಸಹಾಯಕರುಗಳಾದ ಶ್ರೀಮತಿ ಬಿ.ಜಿ. ನೇತ್ರಾವತಿ, ಹೆಚ್.ಆರ್. ಉಮೇಶ್, ಹೆಚ್.ಎಸ್. ಪರಶು ರಾಮ್, ಡಿ.ಹೆಚ್. ಮಾರುತಿ ಮತ್ತಿತರರು ಕಾರ್ಯಕ್ರಮದ ವಿವಿಧ ಹಂತಗಳಲ್ಲಿ ಕಾರ್ಯ ನಿರ್ವಹಿಸಿದರು.

## ಗೋಹತ್ಯೆ ಪ್ರತಿಬಂಧಕ ಕಾಯ್ದೆಗೆ ಸಂಪುಟ ಅಸ್ತು

**(1ನೇ ಪುಟದಿಂದ)** ಮಾಡಬಹುದೆಂಬ ನಿಯಮವಿತ್ತು.

ಈಗಿನ ತಿದ್ದುಪಡಿ ಮಸೂದೆ ಪ್ರಕಾರ ಹಸು ಮತ್ತು ಎತ್ತುಗಳನ್ನು ಜೀವಿತಾವಧಿವರೆಗೂ ವಧಿಸಲು ಅವಕಾಶವಿಲ್ಲ. ಆದರೆ ಎಮ್ಮೆ ಮತ್ತು ಕೋಣಗಳನ್ನು 13 ವರ್ಷದ ಬಳಿಕ ವಧಿಸಲು ಅವಕಾಶ ನೀಡಲಾಗಿದೆ ಎಂದರು. ಹೊಸ ಕಾಯ್ದೆ ಪ್ರಕಾರ ಎಮ್ಮೆ ಮತ್ತು ಕೋಣದ ಮಾಂಸ ಮಾರಾಟಕ್ಕೆ ನಿಷೇಧವಿರುವುದಿಲ್ಲ. ಚರ್ಮೋದ್ಯಮಕ್ಕೂ ಯಾವುದೇ ಸಮಸ್ಯೆಯಾಗುವುದಿಲ್ಲ ಎಂದರು.

ರಾಜ್ಯ ಸರ್ಕಾರ ಈ ಕಾಯ್ದೆಯನ್ನು ಹೊಸದಾಗಿ ಜಾರಿ ಮಾಡಿಲ್ಲ. ಹಿಂದೆ ಇದ್ದ ಕಾಯ್ದೆಗೆ ಕೆಲವು ತಿದ್ದುಪಡಿಗಳನ್ನು ಮಾಡಲಾಗಿದೆ. ಮಾಂಸ ಮಾರಾಟಕ್ಕೆ ಅವಕಾಶವಿದೆ. ಅಷ್ಟೇ ಅಲ್ಲ ಗೋಮಾಂಸ ತಿನ್ನುವುದು ಅಥವಾ ಚರ್ಮ ಮಾರಾಟ ಮಾಡುವುದು ಸೇರಿದಂತೆ ಇದರಡಿ ಯಾವುದೇ ರೀತಿಯ ನಿರ್ಬಂಧ ಹಾಕಿಲ್ಲ ಎಂದರು.

ಗೋಹತ್ಯೆ ಮಾಡಿದವರಿಗೆ ಹಿಂದೆ ಕಾನೂನು ಪ್ರಕಾರ ಶಿಕ್ಷೆಯಾಗುತ್ತಿರಲಿಲ್ಲ. ಈಗ ಈ ಹತ್ಯೆಯಲ್ಲಿ ಭಾಗಿಯಾಗುವವರಿಗೆ ಶಿಕ್ಷೆ ನೀಡುವ ಹಾಗೂ ದಂಡ ವಿಧಿಸುವ ಅಧಿಕಾರವನ್ನು ತಹಸೀಲ್ದಾರ್ ಮತ್ತು ಸಂಬಂಧಪಟ್ಟ ಪೊಲೀಸರಿಗೆ ನೀಡಲಾಗಿದೆ ಎಂದು ಹೇಳಿದರು.

1964ರಿಂದ ಜಾರಿಯಲ್ಲಿದ್ದ ಕಾನೂನು ಬಿಗಿಯಾಗಿರಲಿಲ್ಲ. ಈಗಿನ ಕಾಯ್ದೆಯಲ್ಲಿ ಅಕ್ರಮವಾಗಿ ಹಸುಗಳನ್ನು ಸಾಗಾಟ ಮಾಡಿದರೆ ಅದನ್ನು ವಶಕ್ಕೆ ಪಡೆಯಲಾಗುವುದು. ಅಲ್ಲದೆ ವಾಹನವನ್ನು ಬ್ಯಾಂಕ್ ಗ್ಯಾರಂಟಿ ಮೂಲಕ ಹಿಂಪಡೆಯಬಹುದು. ಗೋಹತ್ಯೆ ನಿಷೇಧವು ಆರೆಸ್ಸೆಸ್ ಅಥವಾ ಬಿಜೆಪಿ ಅಜೆಂಡಾವಲ್ಲ. ರಾಷ್ಟ್ರಪಿತ ಮಹಾತ್ಮಗಾಂಧಿ ಅವರೇ ಗೋಹತ್ಯೆ ನಿಷೇಧ ಕಾಯ್ದೆ ಜಾರಿಯಾಗಬೇಕೆಂದು ಹೇಳಿದ್ದರು. ಸಂವಿಧಾನ ರಚನಾ ಸಮಿತಿಯ ಮೊದಲ ಅಧಿವೇಶನದಲ್ಲೇ ಗೋರಕ್ಷಣೆ ಬಗ್ಗೆ ಚರ್ಚೆಯಾಗಿತ್ತು. ಗೋಹತ್ಯೆ ಮಾಡಬಾರದೆಂಬುದಷ್ಟೇ ನಮ್ಮ ಈ ಕಾಯ್ದೆಯ ಮುಖ್ಯ ಉದ್ದೇಶ ಎಂದು ವಿವರಿಸಿದರು.

ವಯಸ್ಸಾಗಿರುವ ಅಥವಾ ಕಾಯಿಲೆಗೆ ಬಿದ್ದಿರುವ ಹಸುಗಳನ್ನು ಯಾರೂ ಕೊಳ್ಳಲು ಬರುವುದಿಲ್ಲ. ಒಂದು ವೇಳೆ ರೈತರಿಗೆ ಸಾಕಲು ಸಾಧ್ಯವಾಗದಿದ್ದರೆ, ಅವನ್ನು ಸರ್ಕಾರವೇ ನೋಡಿಕೊಳ್ಳಲಿದೆ. ಅದಕ್ಕಾಗಿ ತಾಲ್ಲೂಕು ಮಟ್ಟದಲ್ಲಿ ಸ್ವಯಂಸೇವಾ ಸಂಸ್ಥೆಗಳ ಸಹಕಾರದೊಂದಿಗೆ ಗೋಶಾಲೆಗಳನ್ನು ತೆರೆಯುತ್ತೇವೆ ಎಂದು ಹೇಳಿದರು.

ಸರ್ಕಾರ ಕಾಯ್ದೆಯನ್ನು ಹೊಸದಾಗಿ ತಂದಿಲ್ಲ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕಳೆದ ಮೂರು ದಶಕಗಳಿಂದ ಅಧಿಕಾರದಲ್ಲಿದ್ದಾರೆ. ತಮ್ಮ ಅಧಿಕಾರವಧಿಯಲ್ಲಿ ಒಂದೇ ಒಂದು ದಿನವಾದರೂ ಈ ಕಾಯ್ದೆ ಬಗ್ಗೆ ಮಾತನಾಡಿದ್ದಾರೆಯೇ? ಎಂದು ಪ್ರಶ್ನಿಸಿದರು.

ಕಳೆದ ವಿಧಾನಮಂಡಲದ ಅಧಿವೇಶನ ಸಂದರ್ಭದಲ್ಲಿ ರಾಜ್ಯ ಸರ್ಕಾರ ಗೋಹತ್ಯೆ ನಿಷೇಧ ಕಾಯ್ದೆಯನ್ನು ಮಂಡಿಸಿ, ವಿಧಾನಸಭೆಯಲ್ಲಿ ಅಂಗೀಕಾರ ಪಡೆದುಕೊಂಡಿತ್ತು.

ವಿಧಾನ ಪರಿಷತ್ತಿನಲ್ಲಿ ಅಂಗೀಕಾರ ಪಡೆಯಲು ಜೆಡಿಎಸ್ ಸದಸ್ಯರ ಬೆಂಬಲ ಬೇಕಿತ್ತು. ಆ ಪಕ್ಷದ ನಾಯಕ ಕುಮಾರಸ್ವಾಮಿ ನಿಷೇಧಕ್ಕೆ ನಮ್ಮ ವಿರೋಧವಿದೆ. ಅದರಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಿದಲ್ಲಿ ಅನುಮತಿ ನೀಡುವುದಾಗಿ ಹೇಳಿದ್ದರು.

ಕುಮಾರಸ್ವಾಮಿ ಅವರ ಸಲಹೆಯಂತೆ ಕಾಯ್ದೆಗೆ ಕೆಲವು ತಿದ್ದುಪಡಿ ಮಾಡಿ, ಸುಗ್ರೀವಾಜ್ಞೆ ತರಲಿರುವ ರಾಜ್ಯ ಸರ್ಕಾರ ಮುಂದಿನ ಅಧಿವೇಶನ ದಲ್ಲಿ ವಿಧಾನಪರಿಷತ್ತಿನಲ್ಲಿ ಮಂಡಿಸಿ, ಅನುಮೋದನೆ ಪಡೆದುಕೊಳ್ಳಲಿದೆ.

# ಕಾಂಗ್ರೆಸ್ ಪಕ್ಷದ ನಿರ್ಮೂಲನೆ ಸುಲಭದ ಮಾತಲ್ಲ

### 136ನೇ ಕಾಂಗ್ರೆಸ್ ಸಂಸ್ಥಾಪನಾ ವರ್ಷಾಚರಣೆ ಪ್ರಯುಕ್ತ ಸಮರ್ಪಣಾ ಸಮಾವೇಶದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಮಂಜಪ್ಪ

ದಾವಣಗೆರೆ, ಡಿ.28- ಕಾಂಗ್ರೆಸ್ ಪಕ್ಷದ ನಿರ್ಮೂಲನೆ ಅಷ್ಟು ಸುಲಭವಲ್ಲ. ನಿರ್ಮೂಲನೆ ಮಾಡಲು ಸಾಧ್ಯವಿಲ್ಲ. ಬರುವ ದಿನಗಳಲ್ಲಿ ದೇಶ ಮತ್ತು ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವು ಅಧಿಕಾರಕ್ಕೆ ಬಂದೇ ಬರುವುದು ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪ ಬಿಜೆಪಿ ಪಕ್ಷಕ್ಕೆ ತಿರುಗೇಟು ನೀಡಿದ್ದಾರೆ.

ಅವರು, ಇಂದು ನಗರದ ಜಿಲ್ಲಾ ಕಾಂಗ್ರೆಸ್ ಕಛೇರಿಯ ಎಸ್.ಎಸ್. ಭವನದಲ್ಲಿ 136ನೇ ಕಾಂಗ್ರೆಸ್ ಸಂಸ್ಥಾಪನಾ ವರ್ಷಾಚರಣೆ ಪ್ರಯುಕ್ತ ನಡೆದ ಸಮರ್ಪಣಾ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು.

ವಿರೋಧ ಪಕ್ಷವಾದ ಬಿಜೆಪಿ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರಿಂದ ಕಾಂಗ್ರೆಸ್ ಸಾಧನೆ ಬಗ್ಗೆ ಪ್ರಶ್ನಿಸುತ್ತಾ ಟೀಕೆ, ಗೂಬೆ ಕೂರಿಸುವ, ಮರೆಮಾಚುವ ಕೆಲಸ ಮಾಡಲಾಗುತ್ತಿದೆ. ಕಾಂಗ್ರೆಸ್ ಪಕ್ಷವನ್ನು ನಿರ್ಮೂಲನೆ ಮಾಡುವುದಾಗಿ ಹೇಳಲಾಗುತ್ತಿದೆ. ಆದರೆ, ಕಾಂಗ್ರೆಸ್ ಪಕ್ಷವು ಪ್ರಪಂಚದಲ್ಲೇ ಭಾರತವನ್ನು ಇತರೆ ದೇಶಗಳು ತಿರುಗಿ ನೋಡುವಂತೆ ಮಾಡಿದ್ದು, ಪಕ್ಷವು ಬೆಳೆದು ಬಂದ ದಾರಿ, ಅಭಿವೃದ್ಧಿ ಸಾಧನೆ, ಜನರಿಗೆ ನೀಡಿದ ಕೊಡುಗೆಗಳೇ ಇದಕ್ಕೆಲ್ಲಾ ತಕ್ಕ ಉತ್ತರವಾಗಿದೆ. ಕಾಂಗ್ರೆಸ್ ಸಾಧನೆ, ಸಿದ್ಧಾಂತವನ್ನು ಮೆಚ್ಚಿರುವ ಜನರೇ ಮುಂದಿನ ದಿನಗಳಲ್ಲಿ ಬಿಜೆಪಿಗೆ ತಕ್ಕ ಪಾಠ ಕಲಿಸಲಿದ್ದಾರೆ ಎಂದು ತಿಳಿಸಿದರು.



ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಹುಟ್ಟಿ, ಅಂತೆಯೇ ತ್ಯಾಗ-ಬಲಿದಾನಗಳ ಮುಖೇನ ಸ್ವಾತಂತ್ರ್ಯ ತಂದುಕೊಡುವಲ್ಲಿ ಮುಂಚೂಣಿಯಲ್ಲಿದ್ದ ಪಕ್ಷವೆಂದರೆ ಕಾಂಗ್ರೆಸ್ ಪಕ್ಷ. ಅಲ್ಲದೆಯೇ ಸ್ಥಾಪನೆಯಾದ 135 ವರ್ಷಗಳ ಕಾಲವೂ ದೇಶದ ಜನರ ಏಳಿಗೆ ಮತ್ತು ಉದ್ಧಾರಕ್ಕಾಗಿ ಕೆಲಸ ಮಾಡಿದೆ. ದೇಶದ ಅಭಿವೃದ್ಧಿಗೆ ಕಾಂಗ್ರೆಸ್ ಪಕ್ಷವೇ ಕಾರಣಕರ್ತವಾಗಿದೆ ಎಂದು ಹೇಳಿದರು.

ದೇಶದ ಅನ್ನದಾತರು ಕಳೆದ 1 ತಿಂಗಳಿನಿಂದ ದೆಹಲಿ ಗಡಿಯಲ್ಲಿ ತಮ್ಮ ಹಕ್ಕೊತ್ತಾಯಗಳಿಗಾಗಿ ಚಳಿಯಲ್ಲೂ ಹೋರಾಟ ನಡೆಸುತ್ತಿದ್ದರೂ ಪ್ರಧಾನಿ ಮೋದಿ ಅವರು ರೈತರ ಸಂಕಷ್ಟವನ್ನು ನೇರವಾಗಿ ಭೇಟಿ ಮಾಡಿ ಆಲಿಸುವ ಸೌಜನ್ಯವನ್ನೂ ತೋರದೇ ನಿರ್ಲಕ್ಷ್ಯ ವಹಿಸಿದ್ದು, ಇಂತಹ ಸರ್ಕಾರ ಇದ್ದರೂ ಸತ್ತಂತಾಗಿದೆ. ರೈತರನ್ನು ಬೀದಿಗೆ ತಂದಿರುವುದೇ ಬಿಜೆಪಿ ರೈತರಿಗೆ ನೀಡಿದ ಕೊಡುಗೆ ಎಂದು ಆರೋಪಿಸಿದರು.

ಕೆಪಿಸಿಸಿ ವಕ್ತಾರ ಡಿ. ಬಸವರಾಜ್, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀಮತಿ ಅನಿತಾಬಾಯಿ ಮಾಲತೇಶ್ ಮಾತನಾಡಿದರು.

ಜಿಲ್ಲಾ ಪಂಚಾಯತ್ ಸದಸ್ಯ ಜಿ.ಸಿ. ನಿಂಗಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಯೂಬ್ ಪೈಲ್ವಾನ್, ಜಿಲ್ಲಾ ಕಾರ್ಯದರ್ಶಿ ಎಸ್. ಮಲ್ಲಿಕಾರ್ಜುನ್, ನಗರ ಪಾಲಿಕೆ ಸದಸ್ಯ ಚಮನ್ ಸಾಬ್, ಮಾಜಿ ಸದಸ್ಯ ಕೆ.ಜಿ. ಶಿವಕುಮಾರ್, ಅಲಿ ರಹಮತ್, ಮೈನುದ್ದೀನ್, ಸೇವಾ ದಳದ ಡೋಲಿ ಚಂದ್ರು, ಅಬ್ದುಲ್ ಜಬ್ಬಾರ್, ನಂಜಾನಾಯ್ಕ, ಜಮ್ನಳ್ಳಿ ನಾಗರಾಜ್, ಮಂಜಪ್ಪ, ಲಿಯಾಖತ್ ಅಲಿ, ಬಾಷಾ, ಗೋಪಾಲ್, ಮೊಟ್ಟೆ ದಾದಾಪೀರ್, ಕೆ.ಪಿ. ಮಲ್ಲಿಕಾರ್ಜುನ್, ಸುಷ್ಮಾ ಪಾಟೀಲ್, ಕವಿತಾ ಚಂದ್ರಶೇಖರ್, ದ್ರಾಕ್ಷಾಯಣಮ್ಮ, ಗೀತಾ, ಉಮಾ ಕುಮಾರ್, ಮಂಗಳಮ್ಮ ರಾಜೇಶ್ವರಿ, ಮಂಜಮ್ಮ ಸೇರಿದಂತೆ ಇತರರಿದ್ದರು.

ಈ ಕಾರ್ಯಕ್ರಮಕ್ಕೂ ಮುನ್ನ ನಗರ ಪಾಲಿಕೆ ಆವರಣದ ಮಹಾತ್ಮ ಗಾಂಧಿ, ಡಾ. ಬಿ.ಆರ್. ಅಂಬೇಡ್ಕರ್, ಬಾಬು ಜಗಜೀವನ್ ರಾಮ್ ಅವರ ಪ್ರತಿಮೆ ಮತ್ತು ಹುತಾತ್ಮ ಸ್ವಾತಂತ್ರ್ಯ ಹೋರಾಟಗಾರರ ಸ್ಮಾರಕಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು. ನಂತರ ಪಾಲಿಕೆ ಆವರಣದಿಂದ ಬೈಕ್ ರ್‍ಯಾಲಿ ಮುಖೇನ ನಗರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ಕಾಂಗ್ರೆಸ್ ಕಛೇರಿಗೆ ಆಗಮಿಸಲಾಯಿತು.

**ಬಿಜೆಪಿಗೆ ತಿರುಗೇಟು:** ಕಾಂಗ್ರೆಸ್ ಪಕ್ಷದ ಮುತ್ಸದ್ಧಿ ನಾಯಕರಾದ ಡಾ. ಶಾಮನೂರು ಶಿವಶಂಕರಪ್ಪ, ಎಸ್.ಎಸ್. ಮಲ್ಲಿಕಾರ್ಜುನ್ ಅವರಾದಿಯಾಗಿ ಜಿಲ್ಲೆಯ ಎಲ್ಲಾ ಶಾಸಕರುಗಳು ಅಭಿವೃದ್ಧಿಗೆ ಶ್ರಮಿಸಿದ್ದರು. ಆದರೆ ಬಿಜೆಪಿಯವರು ಅವರ ಅಭಿವೃದ್ಧಿಯನ್ನು ಸಹಿಸದೇ ಶಾಮನೂರು ಕುಟುಂಬದ ವಿರುದ್ಧ ವೈಯಕ್ತಿಕ ತೇಜೋವಧೆ ಮಾಡುವುದನ್ನು ಜಿಲ್ಲಾ ಕಾಂಗ್ರೆಸ್ ಸಹಿಸುವುದಿಲ್ಲ ಎಂದು ಹೆಚ್. ಬಿ. ಮಂಜಪ್ಪ ಎಚ್ಚರಿಸಿದರು.

## ಜಗಳೂರು ಪ.ಪಂ. ಮೇಲ್ದರ್ಜೆಗಾಗಿ ಪ್ರಸ್ತಾವನೆ



**(1ನೇ ಪುಟದಿಂದ)** ರಿಸಲಾಗುವುದು. ಕೆರೆ ನೀರನ್ನು ಶುದ್ಧಗೊಳಿಸಿ ಕುಡಿಯುವ ನೀರು ಪೂರೈಸುವ ಘಟಕ ಸ್ಥಾಪಿಸಲಾಗುವುದು. ಪಟ್ಟಣದಲ್ಲಿ ರಸ್ತೆ ಅಭಿವೃದ್ಧಿಗೊಳಿಸಿ ಸುಂದರವನ್ನಾಗಿಸಲು ಪಕ್ಷಾತೀತವಾಗಿ ಸಹಕರಿಸಬೇಕು ಎಂದರು.

ಪಟ್ಟಣದಲ್ಲಿ ವಾಹನಗಳ ದಟ್ಟಣೆ ಹೆಚ್ಚಾಗಿದ್ದು ರಸ್ತೆ ಮಾರ್ಗ ಮಧ್ಯೆ ವಾಹನಗಳ ನಿಲುಗಡೆಯಿಂದ ಸಾರ್ವಜನಿಕರಿಗೆ ತೀವ್ರ ಅಡಚಣೆಯಾಗಿದೆ. ಈ ಬಗ್ಗೆ ಕ್ರಮ ಕೈಗೊಂಡು ಪ್ರಮುಖ ವೃತ್ತಗಳಲ್ಲಿ ಪೊಲೀಸ್ ಸಿಬ್ಬಂದಿ ನಿಯೋಜಿಸಿ ಸಂಚಾರಿ ನಿಮಯ ಉಲ್ಲಂಘಿಸಿದರೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುವಂತೆ ಪೊಲೀಸ್ ಇಲಾಖೆಗೆ ಸೂಚಿಸಿದರು.

ತಾಲ್ಲೂಕಿನ ವ್ಯಾಸಗೊಂಡನಹಳ್ಳಿ ಹತ್ತಿರ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಪಡಿಸಲಾಗುವುದು. ಒಂದು ಸಾವಿರ ಎಕರೆ ಪ್ರದೇಶದಲ್ಲಿ ಎರಡು ಕಂಪನಿಗಳ ಜಂಟಿಯಾಗಿ ಜವಳಿ ಉದ್ಯಮ ಹಾಗೂ ವಿದ್ಯುತ್ ಘಟಕ ಆರಂಭಿಸಿ ಕನಿಷ್ಠ 5 ಸಾವಿರ ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸಲಾಗುವುದು ಎಂದರು.

ಕಾಮಗಾರಿ ಮಾಡದೆ ಬಾಕಿ ಉಳಿಸಿದ ಗುತ್ತಿಗೆದಾರರಿಗೆ ನೋಟಿಸ್ ಜಾರಿಗೊಳಿಸಿ, ಸ್ಪಂದಿಸದಿದ್ದರೆ ಟೆಂಡರ್ ರದ್ದುಪಡಿಸುವ ಬಗ್ಗೆ, ಗುತ್ತಿಗೆದಾರ ಬಿ.ಟಿ. ಕೃಷ್ಣಪ್ಪ ಅವರ ಕಾಮಗಾರಿಗಳು ಅಪೂರ್ಣವಾಗಿದ್ದು ಪೂರ್ಣಗೊಳಿಸದಿದ್ದಲ್ಲಿ ಇವರನ್ನು ಕಪ್ಪುಪಟ್ಟಿಗೆ ಸೇರಿಸಲು, ತರಕಾರಿ ಮಾರುಕಟ್ಟೆ ಮೇಲೆ ವಿಶಾಲ ಮಾರುಕಟ್ಟೆ ನಿರ್ಮಾಣ ಮಾಡುವ ಕುರಿತು ಅಂದಾಜು ತಯಾರಿಸುವ ಬಗ್ಗೆ ಸೇರಿದಂತೆ ಹಲವು ಚರ್ಚೆಗಳು ನಡೆದವು.

ಈ ಸಂದರ್ಭದಲ್ಲಿ ಪಟ್ಟಣ ಪಂಚಾಯಿತಿ ಉಪಾಧ್ಯಕ್ಷೆ ಲಲಿತ ಶಿವಣ್ಣ, ಮುಖ್ಯಾಧಿಕಾರಿ ರಾಜು ಡಿ. ಬಣಕಾರ್, ಸಿಪಿಐ ಡಿ ದುರುಗಪ್ಪ, ಸದಸ್ಯರಾದ ದೇವರಾಜ್, ನವೀನ್ ಕುಮಾರ್, ಪಾಪಲಿಂಗಪ್ಪ, ಮಂಜಣ್ಣ, ಬಿಕೆ ರವಿ, ರಮೇಶ್, ವಿಶಾಲಾಕ್ಷಿ, ಲುಕ್ಮನ್ ಖಾನ್, ನಜರತ್ ಉನೀಸಾ, ರೇವಣ್ಣ. ಲೋಕಮ್ಮ, ಮಂಜಕ್ಕ, ಶಕೀಲ್, ನಿರ್ಮಲ, ನಾಮ ನಿರ್ದೇಶಿತ ಸದಸ್ಯರಾದ ಬಿ.ಪಿ. ಸುಭಾನ್, ಗಿರೀಶ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಮಲಬಾರ್‌ನಿಂದ ಮೈನ್ ಡೈಮಂಡ್ ಫೆಸ್ಟಿವಲ್



ದಾವಣಗೆರೆ, ಡಿ. 28- ನಗರದ ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್ ನಲ್ಲಿ ಮಲಬಾರ್ ಗ್ರಾಹಕರು ಮೈನ್ ಡೈಮಂಡ್ ಫೆಸ್ಟಿವಲ್‌ಗೆ ಚಾಲನೆ ನೀಡಿದರು.

ಈ ಸುವರ್ಣಾವಕಾಶ ಇದೇ ದಿನಾಂಕ 18 ರಿಂದ ಪ್ರಾರಂಭವಾಗಿದ್ದು, ಜನವರಿ 17 ರವರೆಗೆ ನಡೆಯಲಿದ್ದು, ಉತ್ಸವ ಆಭರಣ ಪ್ರಿಯರ ವಿಕಾಸದ ಅಭಿರುಚಿಗೆ ಅನುಗುಣವಾಗಿ ಆಧುನಿಕ, ಸಾಂಪ್ರದಾಯಿಕ ಮತ್ತು ಸಮಕಾಲೀನ ಡಿಸೈನರ್ ಆಭರಣಗಳ ದೊಡ್ಡ ಸಂಗ್ರಹವನ್ನು ಅನಾವರಣಗೊಳಿಸಿದೆ. ಈ ಅವಧಿಯಲ್ಲಿ ವಜ್ರದ ಮೌಲ್ಯದ ಮೇಲೆ ಶೇ.20 ರಿಯಾಯ್ತಿ ನೀಡುತ್ತಿದೆ. ಗ್ರಾಹಕರಿಗೆ ವಜ್ರದ ಆಭರಣಗಳನ್ನು ಅತ್ಯಂತ ಒಳ್ಳೆಯ ಬೆಲೆಗೆ ಖರೀದಿಸುವ ಅಪರೂಪದ ಅವಕಾಶವಿದೆ. ವಜ್ರಗಳನ್ನು ಅಂತರರಾಷ್ಟ್ರೀಯ ಪ್ರಯೋಗಾಲಯಗಳಾದ ಜಿಐಎ ಮತ್ತು ಐಜಿಐಗಳಿಂದ ಪ್ರಮಾಣೀಕರಿಸಲಾಗಿದೆ ಎಂದು ಸಂಸ್ಥೆ ತಿಳಿಸಿದೆ.

## ಗ್ರಾ.ಪಂ. ಮತ ಎಣಿಕೆ

**(1ನೇ ಪುಟದಿಂದ)** ಭದ್ರವಾಗಿದ್ದು, ನಾಳೆ ಸಂಜೆ ವೇಳೆಗೆ ಫಲಿತಾಂಶ ತಿಳಿಯಲಿದೆ. ಆಯಾ ತಾಲ್ಲೂಕು ಕೇಂದ್ರಗಳಲ್ಲಿ ಮತ ಎಣಿಕೆ ನಡೆಯಲಿದ್ದು, ದಾವಣಗೆರೆ ತಾಲ್ಲೂಕು ಗ್ರಾ. ಪಂ.ಗಳ ಮತ ಎಣಿಕೆ ನಗರದ ಮೋತಿ ವೀರಪ್ಪ ಬಾಲಕರ ಕಾಲೇಜಿನಲ್ಲಿ ನಡೆಯಲಿದೆ.

ಈ ಹಿನ್ನೆಲೆಯಲ್ಲಿ ಮತ ಎಣಿಕೆ ಕೇಂದ್ರಕ್ಕೆ ಸೋಮವಾರ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಭೇಟಿ ನೀಡಿ ಪರಿಶೀಲಿಸಿದರು. ಉಪ ವಿಭಾಗಾಧಿಕಾರಿ ಮಮತಾ ಹೊಸಗೌಡರ್, ತಹಶೀಲ್ದಾರ್ ಗಿರೀಶ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಶಾಲೆ ಆರಂಭದಲ್ಲಿ ಬದಲಾವಣೆ ಇಲ್ಲ : ಸಿಎಂ

**(1ನೇ ಪುಟದಿಂದ)** ಕಾಂಗ್ರೆಸ್‌ನ ಯಾವುದೇ ನಾಯಕರು ಆಸಕ್ತಿ ವಹಿಸಿರಲಿಲ್ಲ ಎಂದು ದೂರಿದರು. ಅಧಿಕಾರ ವಿಕೇಂದ್ರೀಕರಣ ಸಂದರ್ಭದಲ್ಲಿ ಹಲವು ವಿದ್ಯಾವಂತರು ಗ್ರಾಮ ಪಂಚಾಯತಿ ಚುನಾವಣೆಗೆ ಸ್ಪರ್ಧಿಸಿದ್ದಾರೆ. ಮುಂದೆ ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗುವ ಸದಸ್ಯರಿಗೆ ಹೆಚ್ಚಿನ ಶಕ್ತಿ ತುಂಬುವ ಕೆಲಸ ಮಾಡುತ್ತೇವೆ. ಗ್ರಾಮಗಳ ಅಭಿವೃದ್ಧಿ ಮಾಡಲು ಸದಸ್ಯರಿಗೆ ಸಹಕಾರ ಕೊಡಲು ಪ್ರಾಮಾಣಿಕ ಕೆಲಸ ಮಾಡುತ್ತೇವೆ ಎಂದು ಹೇಳಿದರು.

## ರಾಣೇಬೆನ್ನೂರಿನಲ್ಲಿಂದು ಗಂಗಾಜಲ ಚೌಡೇಶ್ವರಿ ಕಾರ್ತಿಕ



ರಾಣೇಬೆನ್ನೂರಿನ ನಗರದೇವತೆ ಶ್ರೀ ಗಂಗಾಜಲ ಚೌಡೇಶ್ವರಿ ದೇವಿ ಕಾರ್ತಿಕೋತ್ಸವ ಇಂದು ನಡೆಯಲಿದೆ. ಜನವರಿ 25 ರಿಂದ 30 ರವರೆಗೆ ದೇವಿಯ ಜಾತ್ರೆ ನಡೆಯಲಿದೆ. ಭಕ್ತಾದಿಗಳು ಭಾಗವಹಿಸುವಂತೆ ದೇವಸ್ಥಾನ ಸಮಿತಿ ವಿನಂತಿಸಿದೆ.

ನೂತನ ಪ್ರಾರಂಭ
ಗ್ಲೋಬಲ್ ಹೆಲ್ಪ್‌ಲೈನ್ ನಿರುದ್ಯೋಗ ನಿವಾರಣ ಸಂಘ (ರಿ.)
Global Helpline Nirudyoga Nivarana Sangha (R.)
#1948/21, 13ನೇ ಕ್ರಾಸ್, ತರಳಬಾಳು ಬಡಾವಣೆ, ದಾವಣಗೆರೆ-577 005.
E.mail : globalhelplinejbj@gmail.com.
ಉದ್ಯೋಗ ಮಾಹಿತಿ ಕೇಂದ್ರ
ಯುವಕ/ಯುವತಿಯರೇ, ಕೆಲಸವಿಲ್ಲ ಎಂದು ಕೊರಗಬೇಡಿ... ನಿಮ್ಮ ವಿದ್ಯಾರ್ಹತೆಗೆ ತಕ್ಕ ಕೆಲಸಗಳನ್ನು ನಮ್ಮ ಸಂಘದ ವತಿಯಿಂದ ಕೊಡಿಸುತ್ತೇವೆ. S.S.L.C., P.U.C., B.A., B.Com., B.Sc., B.B.M., MA, M.Sc, M.Com, MBA, MCA ಆದ ಅಭ್ಯರ್ಥಿಗಳು ನಮ್ಮ ಸಂಘಕ್ಕೆ ಬಂದು ಹೆಸರು, ವಿಳಾಸಗಳನ್ನು ನೋಂದಾಯಿಸಿಕೊಳ್ಳಿ ಹಾಗೂ ಅಂಗವೈಕಲ್ಯವಿರುವವರಿಗೂ ಅವಕಾಶವಿದೆ. "ಕೆಲಸಕ್ಕೆ ಹೋಗಲು ಸಿದ್ಧರಾಗಿ".
ಕರೆ ಮಾಡುವ ಸಮಯ : ಬೆಳಿಗ್ಗೆ 10.00 ರಿಂದ ಸಂಜೆ 05.00ರವರೆಗೆ
ಸಂಪರ್ಕಿಸಿ : 81470 12999, 89512 72999

ದಿ ದಾವಣಗೆರೆ ಅರ್ಬನ್ ಕೋ-ಆಪ್. ಬ್ಯಾಂಕ್ ಲಿ.,
ಪಿ.ಬಿ.ರಸ್ತೆ, ಗಾಂಧಿ ಸರ್ಕಲ್ ಹತ್ತಿರ, ದಾವಣಗೆರೆ-2 ♦ 231155, 272540, 272541, ಮೊ: 98804 14242

ಪ್ರಕಟಣೆ




**ಶ್ರೀ ಆರ್. ಅಜಯ್ ಬಿನ್ ರಾಜೇಶ್, ಮನೆ ನಂ. 164/4, ಮೈಸೂರು ಕಣ, ಬಾರ್ ಲೈನ್ ರಸ್ತೆ, ದಾವಣಗೆರೆ,** ದಾವಣಗೆರೆ ತಾಲ್ಲೂಕ್, ದಾವಣಗೆರೆ ಜಿಲ್ಲೆ, ಇವರು ದಿ ದಾವಣಗೆರೆ ಅರ್ಬನ್ ಕೋ-ಆಪ್. ಬ್ಯಾಂಕ್ ಲಿ., ದಾವಣಗೆರೆ, ಬ್ಯಾಂಕಿನಿಂದ ವಾಹನ ಸಾಲ ಪಡೆದು, ಸುಸ್ತಿ ಸಾಲಗಾರರಾಗಿರುತ್ತಾರೆ. ಇವರ ವಿರುದ್ಧ ನಮ್ಮ ಬ್ಯಾಂಕಿನ ವತಿಯಿಂದ ಸಹಕಾರ ಸಂಘಗಳ ಉಪನಿಬಂಧಕರು, ದಾವಣಗೆರೆ, ಇವರ ನ್ಯಾಯಾಲಯದಿಂದ ಡಿಕ್ರಿ ಆದೇಶ **ಸಂಖ್ಯೆ: 57/2017-18 ರ ದಿನಾಂಕ 20.09.2017ರನ್ವಯ** ಡಿಕ್ರಿ ಆದೇಶ ಪಡೆಯಲಾಗಿದೆ. ಈ ಮೇಲ್ಕಂಡ ಸಾಲಕ್ಕೆ ಜಾಮೀನುದಾರರುಗಳಾದ **ಶ್ರೀ ಪಿ.ಡಿ. ಅರುಣ್‌ಕುಮಾರ್ ಬಿನ್ ಪಿ. ದುಗ್ಗಪ್ಪ ಹಾಗೂ ಶ್ರೀ ಜಿ.ಬಿ. ಬಸವರಾಜ್ ಬಿನ್ ಜಿ. ಬಸಪ್ಪ** ಇವರುಗಳಿಗೆ **ಫಾರಂ ನಂ. 2 (34 (3) ನೇಯ ರೂಲಿನ ಕಲಂ ತಗಾದೆ ಪತ್ರ ಜಪ್ತಿ ಹುಕುಂ)** ನೋಟಿಸ್‌ಗಳನ್ನು ಜಾರಿಗೊಳಿಸಲಾಗಿರುತ್ತದೆ. ಸಾಲಗಾರರಾದ ತಮಗೆ ಫಾರಂ ನಂ.2 ನೋಟಿಸ್‌ಗಳನ್ನು ಜಾರಿಗೊಳಿಸಲು ಡಿಕ್ರಿ ಆದೇಶದಲ್ಲಿನ ವಿಳಾಸಕ್ಕೆ ಹೋದಾಗ ತಾವು ವಿಳಾಸದಲ್ಲಿ ವಾಸವಿರುವುದಿಲ್ಲವೆಂದು ಸದರಿ ಫಾರಂ ನಂ.2 ನೋಟಿಸನ್ನು ನೋಂದಣಿ ಅಂಚೆ ಮೂಲಕ ಕಳುಹಿಸಲಾಗಿದ್ದು, ಅಂಚೆ ಲಕೋಟೆಯು ಏಳು ದಿನಗಳವರೆಗೆ ವಿಚಾರಿಸಿ ಈ ಹೆಸರಿನ ವ್ಯಕ್ತಿಯು ಸದರಿ ವಿಳಾಸದ ಮನೆ ನಂಬರ್‌ನಲ್ಲಿ ಇರುವುದಿಲ್ಲ ಎಂಬ ಅಂಚೆ ಇಲಾಖೆಯ ಷರಾದೊಂದಿಗೆ ವಾಪಾಸ್ ಬಂದಿರುತ್ತದೆ. ಪ್ರಯುಕ್ತ ನಮ್ಮ ಬ್ಯಾಂಕಿನಿಂದ ಸಾಲ ಪಡೆದು ಸುಸ್ತಿ ಸಾಲಗಾರರಾಗಿರುವ ತಮಗೆ ಈ ಮೂಲಕ ತಿಳಿಸುವುದೇನೆಂದರೆ ಈ ಪತ್ರಿಕಾ ಪ್ರಕಟಣೆಯಾದ 15 ದಿನಗಳಲ್ಲಿ ನಮ್ಮ ಬ್ಯಾಂಕಿನಿಂದ ಪಡೆದ ಸಾಲವನ್ನು ಸಂಪೂರ್ಣವಾಗಿ ತೀರುವಳಿ ಮಾಡಲು ತಿಳಿಸಿದೆ. ತಪ್ಪಿದಲ್ಲಿ ನಿಮ್ಮ ಮೇಲೆ ಕಾನೂನು ರೀತ್ಯ ಕ್ರಮಕೈಗೊಳ್ಳಲಾಗುವುದು.

ಸಹಿ/- **ಪ್ರಧಾನ ವ್ಯವಸ್ಥಾಪಕರು**
ದಿ ದಾವಣಗೆರೆ ಅರ್ಬನ್ ಕೋ-ಆಪ್. ಬ್ಯಾಂಕ್ ಲಿ., ದಾವಣಗೆರೆ.
ಪಿ.ಬಿ.ರಸ್ತೆ, ಗಾಂಧಿ ಸರ್ಕಲ್ ಹತ್ತಿರ, ದಾವಣಗೆರೆ-2

# ಎಲ್ಲಾ ವರ್ಗಗಳ ಗ್ರಾಹಕರ ಮೆಚ್ಚುಗೆಗೆ ಪಾತ್ರವಾದ ಕನಕ ಪಟ್ಟಣ ಸಹಕಾರ ಬ್ಯಾಂಕ್

## ನ್ಯಾಯವಾದಿಯೂ ಆಗಿರುವ ಬ್ಯಾಂಕ್ ಅಧ್ಯಕ್ಷ ಲೋಕಿಕೆರೆ ಸಿದ್ದಪ್ಪ ಹರ್ಷ

ದಾವಣಗೆರೆ,ಡಿ.28- ಎಲ್ಲಾ ವರ್ಗಗಳ ಗ್ರಾಹಕರ ಸಹಕಾರ ಮತ್ತು ಪ್ರೋತ್ಸಾಹದಿಂದಾಗಿ ಕನಕ ಪಟ್ಟಣ ಸಹಕಾರ ಬ್ಯಾಂಕ್ ತನ್ನದೇ ಆದ ಸೇವೆಯಿಂದಾಗಿ ಸಮಾಜದಲ್ಲಿ ಪ್ರತಿಷ್ಠಿತ ಬ್ಯಾಂಕು ಎಂದು ಗುರುತಿಸಿಕೊಂಡಿದೆ ಎಂದು ಹಿರಿಯ ನ್ಯಾಯವಾದಿಯೂ ಆಗಿರುವ ಬ್ಯಾಂಕ್ ಆಡಳಿತ ಮಂಡಳಿ ಅಧ್ಯಕ್ಷ ಲೋಕಿಕೆರೆ ಸಿದ್ದಪ್ಪ ಹರ್ಷಗೊಂಡರು.



ಕೊರೊನಾ ವೈರಸ್ ನಿಂದಾಗಿ ಸರ್ಕಾರ ರೂಪಿಸಿರುವ ವಿಡಿಯೋ ಕಾನ್ಫರೆನ್ಸ್ - ವೆಬ್ ಕಾಸ್ಟ್ ಮೂಲಕ ನಿನ್ನೆ ಏರ್ಪಾಡಾಗಿದ್ದ ಕನಕ ಪಟ್ಟಣ ಸಹಕಾರ ಬ್ಯಾಂಕ್ ನ 23ನೇ ವರ್ಷದ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಆರ್ಥಿಕವಾಗಿ ಹಿಂದುಳಿದವರನ್ನು ಸಮಾಜದ ಮುಖ್ಯ ವಾಹಿನಿಗೆ ತರಬೇಕೆಂಬ ಸದುದ್ದೇಶದಿಂದ ಅವರ ಅಗತ್ಯಕ್ಕನುಗುಣವಾಗಿ ನೀಡುತ್ತಿರುವ ಸಾಲ - ಸೌಲಭ್ಯಗಳಿಂದಾಗಿ ಎಲ್ಲಾ ವರ್ಗಗಳ ಗ್ರಾಹಕರ ಮಧ್ಯೆ ಕನಕ ಪಟ್ಟಣ ಸಹಕಾರ ಬ್ಯಾಂಕ್ ಪ್ರತಿಷ್ಠಿತ ಸಹಕಾರ ಬ್ಯಾಂಕುಗಳಲ್ಲೊಂದು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ ಎಂದು ಅವರು ಸಂತಸ ವ್ಯಕ್ತಪಡಿಸಿದರು.

ಕಳೆದ 7-8 ತಿಂಗಳಿನಿಂದ ಆಕಸ್ಮಿಕವಾಗಿ ಬಂದೊದಗಿದ ಕೊರೊನಾ ವೈರಸ್ ನಡುವೆಯೂ ಕಳೆದ ವರ್ಷಕ್ಕಿಂತ ಸುಮಾರು 3 ಕೋಟಿ ರೂ.ಗಳಿಗೂ ಹೆಚ್ಚಿನ ಠೇವಣಿ ಸಂಗ್ರಹಿಸಲಾಗಿದ್ದು, ಇದು ಬ್ಯಾಂಕ್ ಸಲ್ಲಿಸುತ್ತಿರುವ ಅತ್ಯುತ್ತಮ ಸೇವೆ ಮತ್ತು ಸಾರ್ವಜನಿಕರಿಂದ ಪಡೆದ ಮೆಚ್ಚುಗೆಯನ್ನು ಪ್ರತಿಬಿಂಬಿಸುತ್ತದೆ ಎಂದು ಲೋಕಿಕೆರೆ ಸಿದ್ದಪ್ಪ ಅವರು ಉದಾಹರಣೆಯೊಂದಿಗೆ ತಿಳಿಸಿದರು.

**10 ಲಕ್ಷ ರೂ. ಲಾಭ :** 2020, ಮಾರ್ಚ್ ಅಂತ್ಯಕ್ಕೆ ಕನಕ ಪಟ್ಟಣ ಸಹಕಾರ ಬ್ಯಾಂಕ್ 10.62 ಲಕ್ಷ ರೂ. ಲಾಭ ಗಳಿಸಿದೆ. 79.18 ಲಕ್ಷ ರೂ. ಷೇರು ಬಂಡವಾಳ, 85.17 ಲಕ್ಷ ರೂ. ಕಾಯ್ದಿಟ್ಟ ನಿಧಿ ಮತ್ತು ಇತರೆ ನಿಧಿಗಳಾಗಿದ್ದು, 14 ಕೋಟಿ ರೂ. ಠೇವಣಿ ಸಂಗ್ರಹಿಸಿದೆ. ಸದಸ್ಯರ ವಿವಿಧ ಉದ್ದೇಶಗಳಿಗನುಗುಣವಾಗಿ 11 ಕೋಟಿ ರೂ. ಸಾಲ ಸೌಲಭ್ಯ ಒದಗಿಸಿದ್ದು, 16.86 ಲಕ್ಷ ರೂ. ದುಡಿಯುವ ಬಂಡವಾಳ ಹೊಂದಿದೆ ಎಂದು ಅವರು ಬ್ಯಾಂಕಿನ ಪ್ರಗತಿಯ ಪಕ್ಷಿ ನೋಟವನ್ನು ಸಂಕ್ಷಿಪ್ತ ಅಂಕಿ-ಅಂಶಗಳೊಂದಿಗೆ ವಿವರಿಸಿದರು.

ಬ್ಯಾಂಕಿನ ಸದಸ್ಯರಿಗೆ ಶೇ. 6 ರಂತೆ ಲಾಭಾಂಶ ನೀಡಲು ಬ್ಯಾಂಕಿನ ಆಡಳಿತ ಮಂಡಳಿ ತೀರ್ಮಾನ ಕೈಗೊಂಡಿತ್ತು. ಆದರೆ, ಕೋವಿಡ್ -19 ಕಾರಣದಿಂದಾಗಿ ಷೇರುದಾರರಿಗೆ ಲಾಭಾಂಶ ನೀಡದಂತೆ ಎಲ್ಲಾ ಸಹಕಾರಿ ಬ್ಯಾಂಕುಗಳಿಗೆ ತಡೆ ಹಿಡಿದು ಭಾರತೀಯ ರಿಸರ್ವ್ ಬ್ಯಾಂಕ್ ಮಾಡಿದ ಆದೇಶದ ಹಿನ್ನೆಲೆಯಲ್ಲಿ ತಮ್ಮ ಬ್ಯಾಂಕ್ ನೀಡಲುದ್ದೇಶಿಸಿದ್ದ ಲಾಭಾಂಶವನ್ನು ರಿಸರ್ವ್ ಫಂಡ್‌ಗೆ ವರ್ಗಾಯಿಸಲು ನಿರ್ಧರಿಸಲಾಗಿದೆ ಎಂದು ಸಿದ್ದಪ್ಪ ಅವರು ಹೇಳಿದರು.

**ಕೃತಜ್ಞತೆ :** ಸರ್ವತೋಮುಖ ಅಭಿವೃದ್ಧಿಯಲ್ಲಿ ತನ್ನದೇ ಆದ ಛಾಪು ಮೂಡಿಸಿರುವ ಈ ಬ್ಯಾಂಕ್ ಪ್ರಗತಿದಾಯಕವಾಗಿ ಮುನ್ನಡೆಯಲು ಬ್ಯಾಂಕಿನ ಸದಸ್ಯರು ಮತ್ತು ಠೇವಣಿದಾರರ ಪ್ರೋತ್ಸಾಹ ಹಾಗೂ ಸಹಕಾರ, ಸಿಬ್ಬಂದಿ ವರ್ಗದವರ ಪರಿಶ್ರಮ, ಆಡಳಿತ (3ನೇ ಪುಟಕ್ಕೆ)

## ನಗರದ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ದತ್ತಾತ್ರೇಯ ಜಯಂತಿ






ದಾವಣಗೆರೆ,ಡಿ.28- ನಗರದ ಡಿ. ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ ನಲ್ಲಿರುವ ಶ್ರೀಮತಿ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಧನುರ್ಮಾಸದ ಪೂಜಾ ಕಾರ್ಯಕ್ರಮಗಳು ಇದೇ ದಿನಾಂಕ 16ರಿಂದ ಆರಂಭಗೊಂಡಿದ್ದು, ಬರುವ ಜನವರಿ 14ರವರೆಗೆ ನಡೆಯಲಿವೆ.

ದೇವಸ್ಥಾನದ ಶ್ರೀ ವಿನಾಯಕ ಸೇವಾ ಸಮಿತಿ ಆಶ್ರಯದಲ್ಲಿ ಏರ್ಪಾಡಾಗಿರುವ ಈ ಪೂಜಾ ಕಾರ್ಯಕ್ರಮಗಳಲ್ಲಿ ಪ್ರತಿದಿನ ಬೆಳಿಗ್ಗೆ 6.30ಕ್ಕೆ ಶ್ರೀ ಅಮ್ಮನವರಿಗೆ ವೈಯಕ್ತಿಕ ಪೂಜೆಗಳು ಜರುಗಲಿವೆ. ಭಾಗವಹಿಸಲಿಚ್ಛಿಸುವ ಸೇವಾರ್ಥಿಗಳು ತಮ್ಮ ಸೇವೆಯ ದಿನಾಂಕವನ್ನು ದೇವಸ್ಥಾನದಲ್ಲಿ ಮುಂಚಿತವಾಗಿ ನೋಂದಾಯಿಸಬೇಕು.

ಇದೇ ದಿನಾಂಕ 30ರ ಬುಧವಾರದ ಹೊಸ್ತಿಲು ಹುಣ್ಣಿಮೆಯಂದು ಶ್ರೀ ದತ್ತಾತ್ರೇಯ ಜಯಂತಿ ಜರುಗಲಿದೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

## ನಗರದಲ್ಲಿಂದು ವೀರಭದ್ರೇಶ್ವರ ಕಾರ್ತಿಕ




ಹಳೇಪೇಟೆಯ ಶ್ರೀ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಇಂದು ರಾತ್ರಿ 9 ಗಂಟೆಗೆ ಕಾರ್ತಿಕ ಮಹೋತ್ಸವ ನಡೆಯಲಿದೆ. ಕೊರೊನಾ ಹಿನ್ನೆಲೆಯಲ್ಲಿ ಇಂದು ನಡೆಯಬೇಕಿದ್ದ ಮೆರವಣಿಗೆಯನ್ನು ರದ್ದುಪಡಿಸ ಲಾಗಿದೆ ಎಂದು ದೇವಸ್ಥಾನ ಸಮಿತಿಯ ಕಾರ್ಯದರ್ಶಿ ಕುದರಿ ವಿಶ್ವನಾಥ್ ತಿಳಿಸಿದ್ದಾರೆ.

## ಕೊಡದಗುಡ್ಡದಲ್ಲಿಂದು ಕಡೆ ಕಾರ್ತಿಕ



ಜಗಳೂರು ತಾಲ್ಲೂಕಿನ ಕೊಡದಗುಡ್ಡ ಶ್ರೀ ವೀರಭದ್ರಸ್ವಾಮಿಯ ಕಡೇ ಕಾರ್ತಿಕೋತ್ಸವ ಇಂದು ರಾತ್ರಿ 7.30ಕ್ಕೆ ನಡೆಯಲಿದೆ. ಬೆಳ್ಳಿಪಲ್ಲಕ್ಕಿ ಮಹೋತ್ಸವ, ನಂತರ 11 ಗಂಟೆಗೆ ಮಹಾಮಂಗಳರಾತಿ ನಡೆಯುವುದು ಎಂದು ಟ್ರಸ್ಟ್ ಕಾರ್ಯದರ್ಶಿ ರುದ್ರಮುನಿ ತಿಳಿಸಿದ್ದಾರೆ.

## ಆನೆಕೊಂಡದಲ್ಲಿ ನಾಳೆ ಕಾರ್ತಿಕ



ದಾವಣಗೆರೆ,ಡಿ.28- ಇಲ್ಲಿಗೆ ಸಮೀಪದ ಆನೆಕೊಂಡ ಗ್ರಾಮದ ಶ್ರೀ ಬಸವೇಶ್ವರ ಸ್ವಾಮಿ ಕಾರ್ತಿಕೋತ್ಸವವು ನಾಡಿದ್ದು ದಿನಾಂಕ 30ರ ಬುಧವಾರ ರಾತ್ರಿ 8 ಗಂಟೆಗೆ ನಡೆಯಲಿದೆ ಎಂದು ದೇವಸ್ಥಾನ ಸಮಿತಿ ತಿಳಿಸಿದೆ.


## ಏಳನೇ ವರ್ಷದ ಚಿರಸ್ಮರಣೆ



**ದಿ|| ವಾಣಿ ವಿಲಾಸ್ ಶ್ರೀ ಎಸ್.ಆರ್. ವೀರಪ್ಪ**

ಶ್ರೀ ವಾಣಿ ವಿಲಾಸ್ ರೈಸ್ ಮಿಲ್ ಮಾಲೀಕರು

ನಿಧನ : 29.12.2013

ನೀವು ನಮ್ಮನ್ನಗಲಿ ಇಂದಿಗೆ ಏಳು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿ, ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.

ಪತ್ನಿ : ಶ್ರೀಮತಿ ಶಾರದಮ್ಮ ವೀರಪ್ಪ

ಎಸ್.ವಿ. ಉಮೇಶ್, ಎಸ್.ವಿ. ಪ್ರಭು, ಎಸ್.ವಿ. ಶೈಲೇಂದ್ರಬಾಬು

ಸೊಸೆಯಂದಿರು, ಮಗಳು, ಅಳಿಯ, ಮೊಮ್ಮಕ್ಕಳು

ವಾಣಿ ವಿಲಾಸ ಸಹೋದರರು ಮತ್ತು ಬಂಧು-ಮಿತ್ರರು.

- ಶ್ರೀ ವಾಣಿ ಟ್ರಾನ್ಸ್‌ಪೋರ್ಟ್, ಉಮೇಶ್
- ಶ್ರೀ ವಾಣಿ ಕಾರ್ಪೋರೇಷನ್, ಪ್ರಭು (ಗ್ಯಾಸ್ ಅಂಗಡಿ)
- ಶ್ರೀ ವಾಣಿ ಟ್ರೇಡಿಂಗ್ ಕಾರ್ಪೋರೇಷನ್, ಶೈಲೇಂದ್ರ ಬಾಬು


## ಮಲೇಬೆನ್ನೂರಿನಲ್ಲಿ 31 ಕ್ಕೆ ಕಾಡಾ ಸಭೆ

ಮಲೇಬೆನ್ನೂರು, ಡಿ.28- ಅಚ್ಚುಕಟ್ಟಿನ ಬೇಸಿಗೆ ಹಂಗಾಮಿನ ಬೆಳೆಗಳಿಗೆ ಭದ್ರಾ ಜಲಾಶಯದಿಂದ ಬಲ ಮತ್ತು ಎಡ ದಂಡೆ ನಾಲೆಗಳಿಗೆ ನೀರನ್ನು ಹರಿಸುವ ಕುರಿತು ಚರ್ಚಿಸಲು ಕೊನೆ ಭಾಗದ ರೈತರ ಕೋರಿಕೆಯಂತೆ ಭದ್ರಾ ಕಾಡಾ ಅಧ್ಯಕ್ಷರಾದ ಶ್ರೀಮತಿ ಪವಿತ್ರ ರಾಮಯ್ಯ ಅವರು ಈ ಹಿಂದೆ ಜನವರಿ 4 ಕ್ಕೆ 77ನೇ ಭದ್ರಾ ಯೋಜನೆಯ ನೀರಾವರಿ ಸಲಹಾ ಸಮಿತಿ ಸಭೆಯನ್ನು ಮಲೇಬೆನ್ನೂರಿನಲ್ಲಿ ನಿಗದಿ ಮಾಡಿದ್ದರು.

ಇದೀಗ ಜನವರಿ 4 ರ ಬದಲಾಗಿ ಇದೇ ದಿನಾಂಕ 31 ರ ಗುರುವಾರ ಮಧ್ಯಾಹ್ನ 3.30 ಕ್ಕೆ ಮಲೇಬೆನ್ನೂರಿನ ನೀರಾವರಿ ಕಛೇರಿಯಲ್ಲಿ ಸಭೆಯನ್ನು ಆಯೋಜನೆ ಮಾಡಲಾಗಿದೆ ಎಂದು ಭದ್ರಾ ಅಧೀಕ್ಷಕ ಅಭಿಯಂತರರು ಸಭೆಯ ಸೂಚನಾ ಪತ್ರ ಹೊರಡಿಸಿದ್ದಾರೆ.

## ಕೊಟ್ಟೂರು: ಮತ ಎಣಿಕೆ ಸಿಬ್ಬಂದಿಗೆ ತರಬೇತಿ



ಕೊಟ್ಟೂರು, ಡಿ.28- ನಾಡಿದ್ದು ದಿನಾಂಕ 30 ರಂದು ಕೊಟ್ಟೂರು ತಾಲ್ಲೂಕಿನ ಗ್ರಾಮ ಪಂಚಾಯಿತಿ ಚುನಾವಣೆಯ ಮತ ಎಣಿಕೆ ಕಾರ್ಯಕ್ಕೆ ನಿಯೋಜಿಸಿದ ಮತ ಎಣಿಕೆ ಮೇಲ್ವಿಚಾರಕರು ಹಾಗೂ ಎಣಿಕೆ ಸಹಾಯಕರಿಗೆ ಇಂದು ತಾಲ್ಲೂಕು ಕಚೇರಿಯ ಮಹಾತ್ಮಗಾಂಧೀಜಿ ಸಭಾಂಗಣದಲ್ಲಿ ಮಾಸ್ಟರ್ ಟ್ರೈನರ್ಸ್ ಆದ ಎಸ್.ಎಂ. ಮರುಳಸಿದ್ದಯ್ಯ, ಜಿ.ರೇವಣ್ಣ, ಮನೋಹರಸ್ವಾಮಿ ತರಬೇತಿ ನೀಡಿದರು.

ಕೊಟ್ಟೂರಿನಲ್ಲಿ ಮತದಾನವಾದ 13 ಗ್ರಾಮ ಪಂಚಾಯಿತಿಗಳ 81 ಮತಗಟ್ಟೆಗಳಲ್ಲಿ ನಡೆದ ಮತದಾನವಾದ ಮತಪತ್ರಗಳನ್ನು ಎಣಿಕೆ ಮಾಡಲು ಕೊಟ್ಟೂರಿನ ಸರ್ಕಾರಿ ಪದವಿ ಪೂರ್ವ ಕಾಲೇಜ್‌ನಲ್ಲಿ 7 ಕೊಠಡಿಗಳಲ್ಲಿ ಒಟ್ಟು 24 ಟೇಬಲ್‌ಗಳಲ್ಲಿ ಮತ ಎಣಿಕೆ ಕಾರ್ಯ ನಡೆಯಲಿದೆ. 24 ಎಣಿಕೆ ಮೇಲ್ವಿಚಾರಕರು, 48 ಎಣಿಕೆ ಸಹಾಯಕರು, 9 ಕಾಯ್ದಿರಿಸಿದ ಸಿಬ್ಬಂದಿ ಸೇರಿ ಒಟ್ಟು 81 ಎಣಿಕೆ ಸಿಬ್ಬಂದಿಗೆ ತರಬೇತಿ ನೀಡಲಾಯಿತು.

ತರಬೇತಿ ಸಮಯದಲ್ಲಿ ತಹಶೀಲ್ದಾರ್, ಎಂ.ವಿ. ಗೋರೇಕರ್, ತಾಲ್ಲೂಕು ನೋಡಲ್ ಅಧಿಕಾರಿ ಶ್ರೀಧರ್, ಚುನಾವಣೆ ಸಿಬ್ಬಂದಿ ಡಿ. ಶಿವಕುಮಾರ್, ರವಿ ಹರಪನಹಳ್ಳಿ, ಹನುಮಂತ ಇದ್ದರು. ಸಿ.ಮ.ಗುರುಬಸವರಾಜ ನಿರ್ವಹಿಸಿದರು.


**SPECIALLY FOR INSURANCE AGENTS**

WORK WITH INDIA'S LEADING FINANCIAL INSTITUTION EARN UNLIMITED

ONCE IN A LIFETIME GOLDEN OPPORTUNITY FOR INSURANCE AGENTS



Date : 30.12.2020
Registrtion : 10.30 AM
Presention : 11.00 AM


Venu:-
Hotel Anand Residency
Next to new KSRTC Bus stand P.B. Road, Ganesh Layout, Davanagere-577002

One Opportunity Many Benefits
Fixed Salary | Unlimited Income | PF & ESI Benefits
Part-time/Full-time Opportunity | International Conventions

Call For Free Registrtion 98864 28601



# ವನಿತಾ ಸಮಾಜದ ನೂತನ ಪದಾಧಿಕಾರಿಗಳಿಗೆ ಹಾರ್ದಿಕ ಅಭಿನಂದನೆಗಳು



**ಶ್ರೀಮತಿ ನಾಗಮ್ಮ ಕೇಶವಮೂರ್ತಿ**
ಮಾಜಿ ಸಚಿವರು ಹಾಗೂ ಗೌರವ ಅಧ್ಯಕ್ಷರು
ವನಿತಾ ಸಮಾಜ, ದಾವಣಗೆರೆ.

**ಶ್ರೀಮತಿ ಪದ್ಮಾ ಪ್ರಕಾಶ್**
ಕಾರ್ಯದರ್ಶಿಗಳು
ವನಿತಾ ಸಮಾಜ, ದಾವಣಗೆರೆ.

**ಶ್ರೀಮತಿ ಹೇಮಾ ಶ್ರೀನಿವಾಸ್**
ಖಜಾಂಚಿ
ವನಿತಾ ಸಮಾಜ, ದಾವಣಗೆರೆ.

**ಶ್ರೀಮತಿ ನಾಗರತ್ನ ಜಗದೀಶ್**
ಅಧ್ಯಕ್ಷರು
ವನಿತಾ ಸಮಾಜ, ದಾವಣಗೆರೆ.

ದಾವಣಗೆರೆ ವನಿತಾ ಸಮಾಜದ ಕಾರ್ಯಕಾರಿಣಿ ಸಮಿತಿಯ
ನೂತನ ಪದಾಧಿಕಾರಿಗಳಿಗೆ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತಾ...
ಇವರ ಅಧಿಕಾರ ಅವಧಿಯಲ್ಲಿ ಸಾಮಾಜಿಕ ಸ್ಪಂದನೆ, ಮಹಿಳಾ ಸಬಲೀಕರಣ
ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆಯಲಿ ಎಂದು ಶುಭ ಹಾರೈಸುತ್ತೇವೆ.

**ಬಂಧುಗಳು-ಸ್ನೇಹಿತರು-ಅಭಿಮಾನಿಗಳು**


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte